115	ಜಿ.ಎಸ್.ಜಯಸಿಂಹ	-	08-05-1965	18-08-1983	02-07-2014	02-07-2014		ಮುಂಬಡ್ತಿ
116	ಬಿ.ಆರ್.ನಟರಾಜಶೆಟ್ಟಿ	-	20-07-1962	18-08-1983	02-07-2014	02-07-2014		ಮುಂಬಡ್ತಿ
117	ಬಿ.ಮಂಜೇಶ್	-	19-07-1968	20-04-1992	02-07-2014	02-07-2014		ಮುಂಬಡ್ತಿ
118	ಸದಾನಂದ ಆಚಾರ್ಯ	-	22-07-1969	22-07-1992	02-07-2014	02-07-2014		ಮುಂಬಡ್ತಿ
119	ಬಿ.ಆರ್.ಕಲ್ಲಿನಾಥ್	ಪ.ಜಾ	20-07-1971	25-02-2005	02-07-2014	02-07-2014		ಮುಂಬಡ್ತಿ
120	ಪ್ರಮೋದ್ ವಾಸುದೇವ ಶೇಠ್	-	23-03-1965	27-07-1992	10-09-2015	10-09-2015		-
121	ಬಿ.ವಿ.ಹಿರೇಮಠ	-	20-12-1968	21-07-1997	10-09-2015	10-09-2015		-
122	ವೆಂಕಟೇಶ್ವರಪ್ಪ ಗಡ್ಡದ	-	10-07-1971	29-07-1997	10-03-2021	10-09-2015		ಮುಂಬಡ್ತಿ
123	ಪಿ.ಹನುಮಂತರೆಡ್ಡಿ	-	12-07-1967	29-07-1997	10-09-2015	10-09-2015		ಮುಂಬಡ್ತಿ
124	ಹೆಚ್ ಸುರೇಶ್	ಪ.ಜಾ	01-05-1974	15-04-2005	10-09-2015	10-09-2015		ಮುಂಬಡ್ತಿ
125	ಸಂಗಪ್ಪ ಎಸ್ ಗಾರಂಪಳ್ಳಿ	-	13-03-1968	29-07-1997	10-09-2015	10-09-2015		ಮುಂಬಡ್ತಿ
126	ಪಂಡರನಾಥ್ ಜಿ.ರೆಡ್ಡಿ	-	01-02-1967	05-08-1997	10-09-2015	10-09-2015		ಮುಂಬಡ್ತಿ
127	ಎಂ.ಮಂಜಪ್ಪ	-	20-05-1966	23-07-1997	28-04-2016	28-04-2016		ಮುಂಬಡ್ತಿ
128	ಎಚ್.ಆರ್.ಶಂಕರ್	-	01-04-1971	21-07-1997	28-04-2016	28-04-2016		ಮುಂಬಡ್ತಿ
129	ಬಿ.ಜಿ.ಗೋವಿಂದರಾಜು	-	18-07-1968	30-07-1997	28-04-2016	28-04-2016		ಮುಂಬಡ್ತಿ
130	ಬಿ.ಎಸ್.ವಾಸಂತಿ	-	17-01-1970	10-02-2005	19-04-2018	10-09-2015		ಮುಂಬಡ್ತಿ
131	ವೀಣಾ ಎಂ.ಭೋಜ್	-	11-09-1979	28-03-2005	19-04-2018	19-04-2018		ಮುಂಬಡ್ತಿ
132	ಶಿವರಾಮಯ್ಯ	-	20-07-1968	24-07-1997	19-04-2018	19-04-2018		ಮುಂಬಡ್ತಿ
133	ಆರ್.ಶೇಷ	-	15-05-1974	25-07-1997	23-07-2021	19-04-2018		ಮುಂಬಡ್ತಿ
134	ಬಿ.ಮುಧೋಳ್ಕರ್ ಚನ್ನಬಸವಣ್ಣ	-	02-04-1971	29-07-1997	19-04-2018	19-04-2018		ಮುಂಬಡ್ತಿ
135	ಬಿ.ಆರ್.ಹರ್ಷ	-	11-04-1969	23-07-1997	19-04-2018	19-04-2018		ಮುಂಬಡ್ತಿ

136	ಕೆ.ಎನ್.ನಾಗರಾಜ	-	04-01-1970	28-07-1997	19-04-2018	19-04-2018		ಮುಂಬಡ್ತಿ
137	ವೀಣಾ ಸಿ ನಿರ್ವಾಣಿ	-	31-05-1980	31-01-2011	21-11-2019	17-10-2019		ಮುಂಬಡ್ತಿ
138	ಅಸ್ಮ ಸಯದಿ	-	06-01-1979	01-02-2011	02-11-2019	17-10-2019		ಮುಂಬಡ್ತಿ
139	ರಾಕೇಶ್ ಕುಮಾರ್ ವಿ	-	08-06-1984	25-01-2011	18-10-2019	17-10-2019		ಮುಂಬಡ್ತಿ
140	ಶಿಲ್ಪ ದೇಸಾಯಿ	-	09-12-1978	25-01-2011	19-10-2019	17-10-2019		ಮುಂಬಡ್ತಿ
141	ಆಶಾ ಭರತ್	-	24-05-1979	03-02-2011	05-11-2019	17-10-2019		ಮುಂಬಡ್ತಿ
142	ಆರತಿ ವೆಂಕಟೇಶ್ ಸುನದೋಳಿ	-	20-06-1976	25-01-2011	23-10-2019	17-10-2019		ಮುಂಬಡ್ತಿ
143	ಎಂ.ಎಸ್.ಮೀನಾಕ್ಷಿ ಕುಮಾರಿ	-	18-04-1978	25-01-2011	02-07-2021	17-10-2019		ಮುಂಬಡ್ತಿ
144	ಎಂ.ಎಸ್ ಪಂಕಜ	-	17-01-1975	04-02-2011	06-12-2019	17-10-2019		ಮುಂಬಡ್ತಿ
145	ಸಾವಿತ್ರಿ ಪಾಟೀಲ್	-	25-07-1980	28-01-2011	04-05-2020	17-10-2019		ಮುಂಬಡ್ತಿ
146	ಎಂ.ಎನ್.ವೀರಯ್ಯ	-	20-03-1963	03-02-2011	02-11-2019	17-10-2019		ವಯೋನಿವೃತ್ತಿ
147	ಎಚ್.ವಿ.ಸೀಮಾ	-	14-05-1976	25-01-2011	24-10-2019	17-10-2019		ಮುಂಬಡ್ತಿ
148	ಕೆ.ಎನ್. ಧರ್ಮೇಂದ್ರ	ಪ.ಜಾ	15-05-1971	25-01-2011	07.11.2025	17-10-2019		ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 13 ನಯೋಸೇ 2023, ದಿನಾಂಕ 07.11.2025 ರಲ್ಲಿ ದಿನಾಂಕ 17.10.2019 ರಿಂದ ಅನ್ವಯವಾಗುವಂತೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಿ, ಭವಿಷ್ಯವರ್ತಿಯಾಗಿ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.
149	ಜೆ.ಮಂಜುನಾಥ್	-	10-06-1968	17-07-1997	25-10-2019	17-10-2019		ಮುಂಬಡ್ತಿ
150	ಕೆ.ಎ.ಶಾಂತರಾಜ	-	16-07-1968	28-07-1997	25-11-2019	17-10-2019		ಮುಂಬಡ್ತಿ
151	ಹೆಚ್.ನಾಗರಾಜಪ್ಪ	-	20-04-1973	19-07-1997	01-02-2020	17-10-2019		ಮುಂಬಡ್ತಿ
152	ಡಿ.ಟಿ. ನರಸಿಂಗರಾವ್	-	22-02-1966	21-07-1997	18-11-2019	17-10-2019		-
153	ಸಿ.ವಿ.ವೆಂಕಟೇಶಪ್ಪ	-	13-10-1970	24-07-1997	23-10-2019	17-10-2019		-
154	ಸಿ.ಎನ್.ರಾಘವೇಂದ್ರ	-	09-01-1972	29-07-1997	18-11-2019	17-10-2019		-

155	ಎನ್.ಟಿ. ಶಂಕರರೆಡ್ಡಿ	-	01-06-1966	21-07-1997	20-06-2022	30-05-2022		-
156	ಎಂ. ವಹೀದ್ ಅಖ್ತರ್	-	01-09-1973	29-07-1997	08-11-2022	30-05-2022		-
157	ಶಂಕರಪ್ಪ. ಎಂ	-	01-07-1968	21-07-1997	31-07-2022	30-05-2022		-
158	ಶಿವರಾಮು ಕೆ.ಪಿ	-	01-03-1966	24-07-1997	06-06-2022	30-05-2022		-
159	ಹನುಮಂತರಾಯಪ್ಪ. ಬಿ	-	20-02-1968	16-10-1999	14-06-2022	30-05-2022		-
160	ಲಸುಮಾ ನಾಯಕ್. ಸಿ	ಪ.ಜಾ	01-09-1969	18-11-2003	08-07-2022	30-05-2022		-
161	ಮೀನಾಕ್ಷಿ ಗೋ ಜೋತೆಣ್ಣವರ್	ಪ.ಪಂ	08-03-1966	29-10-1999	29-06-2022	30-05-2022		-
162	ಕೆ.ಬಿ.ನಿಂಗರಾಜು	-	26-07-1967	20-10-1999	01-07-2022	30-05-2022		-
163	ಮಹಜರ್ ಷರೀಫ್	-	30-07-1967	16-10-1999	21-06-2022	30-05-2022		-
164	ಎಸ್.ಜಗದೀಶ	-	01-08-1967	03-11-1999	18-05-2023	10-03-2023	30-05-2022	ದಿನಾಂಕ 11.07.2014 ರಂದು ಸ್ಥಳೀಯ ವೃಂದ ರಚನೆ ಮಾಡುವ ಮೊದಲಿಗೆ ದಿ: 08.08.2013 ರಂದು ಮೂಲ ವೃಂದದ ಜ್ಯೇಷ್ಠತಾ ಪಟ್ಟಿಯನ್ನಾಧರಿಸಿ ಮುಂಬಡ್ತಿ ನೀಡಿರುವುದನ್ನು ಪುನರ್ ಪರಿಶೀಲಿಸಿ, ಮರು ಹೊಂದಾಣಿಕೆ ಮಾಡಿದಾಗ ದಿನಾಂಕ 08.08.2013 ರಂದು ಸ್ಥಳೀಯ ವೃಂದ ರಚಿಸಿದ್ದರೆ ಈ ಅಧಿಕಾರಿಗಳಿಗೂ ಸಹ ಮುಂಬಡ್ತಿಗೆ ಅರ್ಹರಿದ್ದರೆಂಬುದನ್ನು ಪರಿಗಣಿಸಿ ಪ್ರಸ್ತಾಪಿತ ದಿನಾಂಕವನ್ನು ನಿಗಧಿಪಡಿಸಲಾಗಿದೆ.
165	ಶಿವಕುಮಾರ್ ಡಿ ಪಾಟೀಲ	-	16-06-1973	05-11-1999	17-03-2023	10-03-2023	30-05-2022	

166	ವಿಷ್ಣು ನಾರಾಯಣ ತೇರದಾಳ್	ಪ.ಜಾ	08-07-1974	30-12-2004	24-03-2023	10-03-2023	30-05-2022	-
167	ಶಿವರಾಜ ಶಂಕರ್ ಗಸ್ತಿ	ಪ.ಜಾ	26-06-1969	24-12-2004	03-08-2023	10-03-2023	30-05-2022	-
168	ವಿಜಯ ಮಹಾಂತೇಶ ಎ. ಧರ್ಮಂತಿ	-	21-01-1986	19-02-2010	10-03-2023	10-03-2023	30-05-2022	ದಿನಾಂಕ 11.07.2014 ರಂದು ಸ್ಥಳೀಯ ವೃಂದ ರಚನೆ ಮಾಡುವ ಮೊದಲಿಗೆ ದಿನಾಂಕ 08.08.2013 ರಂದು ಮೂಲ ವೃಂದದ ಜ್ಯೇಷ್ಠತಾ ಪಟ್ಟಿಯನ್ನಾಧರಿಸಿ ಮುಂಬಡ್ತಿ ನೀಡಿರುವುದನ್ನು ಪುನರ್ ಪರಿಶೀಲಿಸಿ, ಮರು ಹೊಂದಾಣಿಕೆ ಮಾಡಿದಾಗ ದಿನಾಂಕ 08.08.2013 ರಂದು ಸ್ಥಳೀಯ ವೃಂದ ರಚಿಸಿದ್ದರೆ ಈ ಅಧಿಕಾರಿಗಳಿಗೂ ಸಹ ಮುಂಬಡ್ತಿಗೆ ಅರ್ಹರಿದ್ದರೆಂಬುದನ್ನು ಪರಿಗಣಿಸಿ ಪ್ರಸ್ತಾಪಿತ ದಿನಾಂಕವನ್ನು ನಿಗಧಿಪಡಿಸಲಾಗಿದೆ.
169	ನರೇಂದ್ರ ಕುಮಾರ್	-	21-11-1983	19-02-2010	20-03-2023	10-03-2023	30-05-2022	
170	ಆರ್.ಪ್ರಕಾಶ್	ಪ.ಜಾ	12-07-1980	17-07-2010	24-03-2023	10-03-2023	30-05-2022	
171	ಪ್ರಸನ್ನ.ಆರ್	ಪ.ಜಾ	10-06-1985	18-02-2010	19-04-2023	10-03-2023	30-05-2022	
172	ಲಲಿತಾ ನಾಯಕ್	ಪ.ಜಾ	22-07-1976	17-07-2010	20-03-2023	10-03-2023	30-05-2022	
173	ವಿದ್ಯಾ ಬೆಳಂಕರ್	ಪ.ಜಾ	30-04-1976	05-05-2010	05-04-2023	10-03-2023	30-05-2022	
174	ಭಂಡಾರಿ ಹೆಚ್ ವಿಷ್ಣು	-	02-04-1964	10-11-1999	12-02-2024	10-03-2023	30-05-2022	
175	ರೂಪ.ಸಿ.ಕೆ	-	25-08-1971	25-10-1999	27-06-2022	30-05-2022	30-05-2022	ದಿನಾಂಕ 08.08.2013ಕ್ಕೆ ಉಳಿಕೆ ಮೂಲ ವೃಂದದಲ್ಲಿ ಹುದ್ದೆ ಖಾಲಿ ಇಲ್ಲದ ಕಾರಣ ದಿನಾಂಕ 28.04.2016 ರಂದು ನೀಡಲಾದ ಮುಂಬಡ್ತಿ ದಿನಾಂಕಕ್ಕೆ ಕಾಲ್ಪನಿಕ ಅರ್ಹತಾ ದಿನಾಂಕವೆಂದು ನಿಗಧಿಪಡಿಸಲಾಗಿದೆ.
176	ರಂಜನಾ ಡಿ ಮುನವಳ್ಳಿ	-	15-02-1969	16-10-1999	06-07-2022	30-05-2022	30-05-2022	
177	ಮಹಾಂತೇಶ್ ಐ. ಪೂಜಾರ್	-	22-07-1978	20-10-1999	31-05-2022	30-05-2022	30-05-2022	
178	ಕೆ.ಎಸ್. ಮಹೇಶ್ವರಪ್ಪ	-	10-08-1964	20-10-1999	12-08-2022	30-05-2022	30-05-2022	

								ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 288 ನಯೋಸೇ 2024(ಇ), ದಿನಾಂಕ 10-10-2025 ರಲ್ಲಿ ದಿನಾಂಕ 07-12-2024 ರಿಂದ ಅನ್ವಯವಾಗುವಂತೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಿ, ಭವಿಷ್ಯವರ್ತಿಯಾಗಿ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.
179	ತಿಪ್ಪಣ್ಣ ಎಸ್. ಮಾಂಗ್	ಪ.ಜಾ	25-07-1968	11-09-2001	10-10-2025	07-12-2024	-	ಉಪ ನಿರ್ದೇಶಕರ ಹುದ್ದೆಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲಾಗಿದೆ.
180	ಅಲ್ಲಾ ಬಕಾಶ್	-	26-03-1986	20-03-2017	23-09-2025	07-12-2024	-	-
181	ಸೌಮ್ಯ ಎಂ.ಎನ್.	-	17-02-1982	23-03-2017	19-02-2025	07-12-2024	-	-
182	ಪೃಜ್ಞ ಪ್ರಕಾಶ್	-	10-04-1987	22-03-2017	18-02-2025	07-12-2024	-	-
183	ಅಂಜನ್ ಎಲ್. ಹಳೇಮನೆ	-	03-07-1986	23-03-2017	14-01-2025	07-12-2024	-	-
184	ಮೋಹನ್ ಎಂ.	-	06-06-1985	23-03-2017	18-12-2024	07-12-2024	-	-
185	ರವೀಶ್ ಸಿ.	-	09-11-1981	30-03-2017	12-12-2024	07-12-2024	-	-
186	ಶಿವಪ್ರಸಾದ್ ವಿ.	-	29-12-1985	20-03-2017	12-12-2024	07-12-2024	-	-
187	ವಿಶ್ವ ಎಸ್.	-	03-04-1987	18-03-2017	10-12-2024	07-12-2024	-	-
188	ವಿದ್ಯಾ ಡಿ.	-	21-12-1988	23-03-2017	18-12-2024	07-12-2024	-	-
189	ಮಹೇಶ್ ಚಂದ್ರಗೌಡ	-	02-05-1980	30-03-2017	10-12-2024	07-12-2024	-	-
190	ಧೃವರಾಜ್	ಪ.ಜಾ	16-07-1987	24-03-2017	12-12-2024	07-12-2024	-	-
191	ಅಭಿಲಾಷ್ ಎಂ.ಪಿ.	ಪ.ಜಾ	02-08-1989	20-03-2017	31-01-2025	07-12-2024	-	-
192	ಜಗನ್ ಶೆಟ್ಟರ್	-	30-06-1987	24-03-2017	17-03-2025	28-02-2025	-	-

(ಲತಾ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-366

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.21/2019 ದಿನಾಂಕ: 14.02.2019
ಡಿ.ಎಫ್.ಓಸಿ ಸಂಖ್ಯೆ:14/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ. , ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು :Mr. Ebinasan Dorababu S/o Ebinasan, #24, Madhavaram Yadamari (Mandal), Chittor District.

* * * * * *

<u>ಪ್ರಕರಣದ ಮುಖ್ಯಾಂಶಗಳು:-</u>

1. ದಿನಾಂಕ 14/02/2019 ರಂದು ತಿರುಮಲಶೆಟ್ಟಿಹಳ್ಳಿ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ರವರುಗಳು ಠಾಣಾ ಸರಹದ್ದಿನಲ್ಲಿ ಬೆಳಿಗ್ಗೆ ಸುಮಾರು 05:30 ಗಂಟೆಯಲ್ಲಿ ತಿರುಮಲಶೆಟ್ಟಿಹಳ್ಳಿ ಕ್ರಾಸ್ ನಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಹೊಸಕೋಟೆಯ ಕಡೆಯಿಂದ ಒಂದು ಕಾರು ಬರುತ್ತಿದ್ದು ಕಾರನ್ನು ನಿಲ್ಲಿಸುವಂತೆ ಸೂಚಿಸಿದರು ಸಹ, ಕಾರಿನ ಚಾಲಕ ಕಾರನ್ನು ರಸ್ತೆಯಲ್ಲಿ ವೇಗವಾಗಿ ಓಡಿಸಿಕೊಂಡು ಹೋಗಿದ್ದರಿಂದ ಕೂಡಲೇ ಪೊಲೀಸ್ ಸಿಬ್ಬಂದಿಗಳು ಸದರಿ ಕಾರನ್ನು ಹಿಂಬಾಲಿಸಿಕೊಂಡು ಹೋಗಿ ಸಮೇತನಹಳ್ಳಿ ಗ್ರಾಮದ ಸಮೇತನ ಲೇಕ್ ಫ್ರಂಟ್ ಅಪಾರ್ಟ್ಮೆಂಟ್ ಹತ್ತಿರ ಕಾರನ್ನು ತಡೆದು ನಿಲ್ಲಿಸಿದಾಗ, ಆ ಸಂದರ್ಭದಲ್ಲಿ ಚಾಲಕ ಮತ್ತು ಕಾರಿನಲ್ಲಿದ್ದವರು ಸ್ಥಳದಿಂದ ಓಡಿ ಹೋಗಿದ್ದು ಕಾರನ್ನು ಪರಿಶೀಲಿಸಲಾಗಿ ಬಿಳಿ ಬಣ್ಣದ ಮಹೀಂದ್ರ ಜೈಲೋ ಕಾರಾಗಿದ್ದು ಕಾರಿನ ಮುಂಭಾಗ ಮತ್ತು ಹಿಂಭಾಗ AP-03-BN-6379 ಎಂಬ ನೊಂದಣಿ ಸಂಖ್ಯೆ ಇರುತ್ತದೆ, ಕಾರಿನ ಒಳ ಭಾಗದಲ್ಲಿ ಪರಿಶೀಲಿಸಲಾಗಿ ಒಟ್ಟು 14 ರಕ್ತ ಚಂದನಮರದ ತುಂಡುಗಳಿದ್ದು ಪ್ರತಿಯೊಂದು ತುಂಡುಗಳಿಗೆ, ಕ್ರಸಂ P-01 ರಿಂದ P-14 ರವರೆಗೆ ನಂಬರುಗಳನ್ನು ಕೊಟ್ಟು ಗುರುತು ಮಾಡಿ, ಅಳತೆ ಸ್ಕೆಲ್ ಮತ್ತು ಅಳತೆ ಟೇಪುಗಳಿಂದ ಪ್ರತಿಯೊಂದು ಮರದ ತೂಕ. ಸುತ್ತಳತೆ, ಮತ್ತು ಉದ್ದವನ್ನು ಅಳತೆ ಮಾಡಲಾಗಿ ಒಟ್ಟು ಸುಮಾರು 365 ಕೆ.ಜಿ ಇದ್ದು ಇದರ ಅಂದಾಜು ಮಾರುಕಟ್ಟೆ ಬೆಲೆ ಸುಮಾರು ರೂ. 5,47,000-00 ಆಗಿರುತ್ತದೆ. ಆರೋಪಿ ಕಾರಿನ ಚಾಲಕ ಮತ್ತು ಮಾಲೀಕ ಹಾಗು ಇತರರು ರಕ್ತ ಚಂದನ ಮರದ ತುಂಡುಗಳನ್ನು ಎಲ್ಲಿಂದಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ರಕ್ತಚಂದನ ಮರದ ತುಂಡುಗಳನ್ನು ಹಾಗೂ ಸದರಿ ಕಾರು, ಕಬ್ಬಿಣದ ಎರಡು ಮಚ್ಚುಗಳನ್ನು ಅಮಾನತ್ತುಪಡಿಸಿಕೊಂಡು, ಮೇಲ್ಕಂಡ AP-03-BN-6379 ಕಾರಿನ ಚಾಲಕ, ಮಾಲೀಕ, ಮತ್ತು ಇತರರ ವಿರುದ್ದ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80 ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144, 145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 21/2019 ನ್ನು ದಿನಾಂಕ:14.02.2019 ರಂದು ದಾಖಲಿಸಲಾಗಿರುತ್ತದೆ ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನೊಂದಣಿ ಸಂಖ್ಯೆ AP-03-BN-6379 ಕಾರಿನ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರಿನ ಆರ್.ಟಿ.ಓ ದಾಖಲೆಗಳಲ್ಲಿ Ebinasan Dorababu S/o Ebinasan, #24, Madhavaram Yadamari (Mandal), Chittor District ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ

ಹೆಸರಿನ ವಿಳಾಸಕ್ಕೆ ದಿನಾಂಕ: 09.01.2020, 23.01.2020, 30.01.2020, 06.02.2020, 04.08.2022, 18.08.2022, 15.09.2022, 29.09.2022, ಹಾಗೂ ಅಂತಿಮ ನೋಟೀಸ್ 03.09.2025 ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಸದರಿಯವರಿಗೆ ನೀಡಿದ ನೋಟೀಸ್‌ಗಳು ಸದರಿ ವಿಳಾಸದಲ್ಲಿ ಸ್ವೀಕೃತವಾಗದೇ ವಾಪಸ್ಸು ಈ ಕಛೇರಿಗೆ ಬಂದಿರುತ್ತವೆ.

3. ನ್ಯಾಯಾಲಯವು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ಸಾಗರ್ ವಿ. ಬಿನ್ ವೆಂಕಟರಮಣಪ್ಪ ಮತ್ತು ಶ್ರೀ ವೆಂಕಟೇಶ್ ಎನ್ ಬಿನ್ ನಾರಾಯಣಪ್ಪ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ಪಾಲಕ್ಷ ಪ್ರಭು ಕೆ.ಎನ್ ಆರಕ್ಷಕ ಉಪ ನಿರೀಕ್ಷಕರು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರು ಗೈರುಹಾಜರಾಗಿರುತ್ತಾರೆ. ಪ್ರಕರಣವು ಹಳೆಯದಾದ ಕಾರಣ ಸದರಿಯವರ ವಿಚಾರಣೆಯನ್ನು ಬಿಡುಗಡೆ ಮಾಡಲಾಗಿರುತ್ತದೆ. ವಾಹನದ ಮಾಲೀಕರು ಇದುವರೆವಿಗೂ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿಯವರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಮಹೀಂದ್ರ ಜೈಲೋ ಕಾರ್ ವಾಹನದ ನೊಂದಣಿ ಸಂಖ್ಯೆ AP-03-BN-6379 ಒಟ್ಟು 365 ಕೆ.ಜಿ ತೂಕವುಳ್ಳ 14 ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 365 ಕೆ.ಜಿ. ತೂಕದ ರಕ್ತ ಚಂದನ ಮರದ ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 14.02.2019 ರಂದು ಬೆಳಿಗ್ಗೆ ಸುಮಾರು 05:30 ಗಂಟೆಯಲ್ಲಿ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ತಿರುಮಲಶೆಟ್ಟಿಹಳ್ಳಿ ಕ್ರಾಸ್ ನಲ್ಲಿ ಪೊಲೀಸ್ ಸಿಬ್ಬಂದಿಗಳು ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಹೊಸಕೋಟೆಯ ಕಡೆಯಿಂದ ನೊಂದಣಿ ಸಂಖ್ಯೆ AP-03-BN-6379 ಒಂದು ಕಾರು ಬರುತ್ತಿದ್ದು ಕಾರನ್ನು ನಿಲ್ಲಿಸುವಂತೆ ಸೂಚಿಸಿದಾಗ ಕಾರಿನ ಚಾಲಕ ಕಾರನ್ನು ರಸ್ತೆಯಲ್ಲಿ ವೇಗವಾಗಿ ಓಡಿಸಿಕೊಂಡು ಹೋಗಿದ್ದರಿಂದ ಕೂಡಲೇ ಪೊಲೀಸ್ ಸಿಬ್ಬಂದಿಗಳು ಸದರಿ ಕಾರನ್ನು ಹಿಂಬಾಲಿಸಿಕೊಂಡು ಹೋಗಿ ಸಮೇತನಹಳ್ಳಿ ಗ್ರಾಮದ ಸಮೇತನ ಲೇಕ್ ಫ್ರಂಟ್ ಅಪಾರ್ಟ್ಮೆಂಟ್ ಹತ್ತಿರ ಕಾರನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಕಾರಿನಲ್ಲಿ ರಕ್ತ ಚಂದನ ಮರದ ತುಂಡು ಇರುವುದು ಕಂಡುಬಂದಿರುತ್ತದೆ. ರಕ್ತ ಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕ ಮಾಡುತ್ತಿದ್ದ ಆರೋಪದ ಮೇಲೆ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತುಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

7. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಮಹೀಂದ್ರ ಜೈಲೋ ಕಾರ್ ವಾಹನದ ನೋಂದಣಿ ಸಂಖ್ಯೆ: AP-03-BN-6379 ರಲ್ಲಿ ಒಟ್ಟು 365 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 14 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

8. ಮಹೀಂದ್ರ ಜೈಲೋ ನೊಂದಣಿ ಸಂಖ್ಯೆ AP-03-BN-6379 ವಾಹನವು ನ್ಯಾಯಾಲಯದ ಮುಂದೆ ಸುಮಾರು 06 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: AP-03-BN-6379 ಹಾಗೂ ರಕ್ತ ಚಂದನವನ್ನು

ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

9. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಮಹೀಂದ್ರ ಜೈಲೋ ನೊಂದಣಿ ಸಂಖ್ಯೆ AP-03-BN-6379 ರಲ್ಲಿ ಅಕ್ರಮವಾಗಿ ಒಟ್ಟು 365 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 14 ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ 365 ಕೆ.ಜಿ. ತೂಕವುಳ್ಳ 14 ತುಂಡುಗಳನ್ನು ಮಹೀಂದ್ರ ಜೈಲೋ ವಾಹನ ನೊಂದಣಿ ಸಂಖ್ಯೆ: AP-03-BN-6379ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80 ಕರ್ನಾಟಕ ಅರಣ್ಯ ನಿಯಮ- 1963 ರ ಕಲಂ 144, 145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರೈಂ ನಂ. 21/2019 ದಿ 14.02.2019) ರಲ್ಲಿ ಒಳಗೊಂಡಿರುವ ಮಹೀಂದ್ರ ಜೈಲೋ ವಾಹನ ನೊಂದಣಿ ಸಂಖ್ಯೆ: AP-03-BN-6379 ವಾಹನ ಹಾಗೂ ಒಟ್ಟು 365 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 14 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:02-02-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-367

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ,

ಸೂಲಿಬೆಲೆ ಪೊಲೀಸ್ ಠಾಣೆಯ ಕ್ರೈಂ ನಂ.43/2019 ದಿನಾಂಕ: 03.05.2019
ಡಿ.ಎಫ್.ಓಸಿ ಸಂಖ್ಯೆ:16/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಸೂಲಿಬೆಲೆ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು :1) ಶಾಂತ ಬಿನ್ ಮುನಿಯಪ್ಪ 30 ವರ್ಷ ಕೂಲಿಕೆಲಸ, ಉಣಗಿನತಂ ಗ್ರಾಮ, ಯಾಪನಪಲ್ಲಿ ತಾಲ್ಲೂಕು ಕೃಷ್ಣಗಿರಿ ಜಿಲ್ಲೆ, ತಮಿಳುನಾಡು
2) ಅಪ್ರೋಜ್ ಬಿನ್ ಅಲ್ಲಾಬಕಾಷ್ 30 ವರ್ಷ ಆಟೋಡ್ರೈವರ್, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು
3) Mr. Arif S/o Nazeer Ahmed, No.23, 12. 17th Cross Padarayanapura, Bengaluru, Karnataka.

* * * * * *

<u>ಪ್ರಕರಣದ ಮುಖ್ಯಾಂಶಗಳು:-</u>

1. ದಿನಾಂಕ 03/05/2019 ರಂದು ಆರಕ್ಷಕ ಉಪ ನಿರೀಕ್ಷಕರು, ಕಾ&ಸು ರವರು ಹಾಜರುಪಡಿಸಿದ ವರದಿಯಲ್ಲಿ "ಈ ದಿನ ನಾನು ಗಸ್ತಿನಲ್ಲಿದ್ದಾಗ ಸಂಜೆ 5-00 ಗಂಟೆಗೆ ಹೊಸಕೋಟೆ ಉಪ ವಿಭಾಗದ ಡಿ.ವೈ.ಎಸ್.ಪಿ ರವರು ದೂರವಾಣಿ ಕರೆಮಾಡಿ ಹೊಸಕೋಟೆ-ಜಂಗಮಕೋಟೆ ರಸ್ತೆಯಲ್ಲಿ ಯಾವುದೋ ಒಂದು ಆಟೋದಲ್ಲಿ ಶೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವ ಕುರಿತು ತಮಗೆ ಬಂದ ಖಚಿತ ಮಾಹಿತಿಯನ್ನು ತಿಳಿಸಿದ ಮೇರೆಗೆ ನಂದಗುಡಿ ಸಿಪಿಐ ರವರ ಮಾರ್ಗದರ್ಶನದಂತೆ ಸಿಬ್ಬಂದಿಗಳೊಂದಿಗೆ ಹೊಸಕೋಟೆ ಜಂಗಮಕೋಟೆ ರಸ್ತೆಯ ಬೆಂಡಿಗಾನಹಳ್ಳಿ ಕ್ರಾಸ್ ಬಳಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಮಯದಲ್ಲಿ ಸಂಜೆ 6-00 ಗಂಟೆಗೆ ಹೊಸಕೋಟೆ ಕಡೆಯಿಂದ ವೇಗವಾಗಿ ಬಂದ ಒಂದು ಆಟೋವನ್ನು ತಡೆಯಲು ಹೋದಾಗ ನಿಲ್ಲಿಸದೆ ವೇಗವಾಗಿ ಹೋರಟಾಗ ಜೀಪ್ ನಲ್ಲಿ ಹಿಂಬಾಲಿಸಿಕೊಂಡು ಹೋಗಿ ಆಟೋವನ್ನು ತಡೆದು ನಿಲ್ಲಿಸಿದಾಗ ಆಟೋದಲ್ಲಿದ್ದ ಇಬ್ಬರು ವ್ಯಕ್ತಿಗಳು ಓಡಿಹೋಗಲು ಯತ್ನಿಸಿದಾಗ ಸಿಬ್ಬಂದಿ ಅವರನ್ನು ಹಿಡಿದು ಆಟೋವನ್ನು ಪರಿಶೀಲಿಸಿದಾಗ ನೊಂದಣಿ ಸಂಖ್ಯೆ KA-02-D-3087 ಆಟೋದಲ್ಲಿ 03 ಪ್ಲಾಸ್ಟಿಕ್ ಚೀಲದಲ್ಲಿ ಶ್ರೀಗಂಧ ಮರದ ಸಣ್ಣ ಸಣ್ಣ ಪೀಸ್‌ಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ, ಸದರಿ ಇಬ್ಬರು ಆಸಾಮಿಗಳ ವಿವರಗಳನ್ನು ಕೇಳಲಾಗಿ ಒಬ್ಬ ಒಂದು ಬಾರಿ ಸೈಯ್ಯದ್ ಮಾಲೂರು ಎಂದು ಮತ್ತೊಮ್ಮೆ ಅಪ್ರೋಜ್ ಬಿನ್ ಅಲ್ಲಾಬಕಾಷ್ 30 ವರ್ಷ ಆಟೋಡ್ರೈವರ್, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಮತ್ತೊಬ್ಬ ಆಸಾಮಿ ಒಂದು ಬಾರಿ ಮಣಿ ತಮಿಳುನಾಡು

ಮತ್ತೊಂದು ಬಾರಿ ಶಾಂತ ಬಿನ್ ಮುನಿಯಪ್ಪ 30 ವರ್ಷ ಕೂಲಿಕೆಲಸ ಉಣಗಿನತಂ ಗ್ರಾಮ, ಯಾಪನಪಲ್ಲಿ ತಾಲ್ಲೂಕು ಕೃಷ್ಣಗಿರಿ ಜಿಲ್ಲೆ, ತಮಿಳುನಾಡು ಎಂದು ಹೇಳಿರುತ್ತಾನೆ. ಶ್ರೀಗಂಧದ ಕುರಿತು ವಿಚಾರಿಸಲಾಗಿ ಶಾಂತ ಎಂಬಾತ ತಮಿಳುನಾಡಿನಿಂದ ಹೆಸರು ವಿಳಾಸ ಗೊತ್ತಿಲ್ಲದ ಆಸಾಮಿಯಿಂದ ಈ ಶ್ರೀಗಂಧದ ಸಣ್ಣ ಸಣ್ಣ ಪೀಸ್ ಗಳನ್ನು ಖರೀದಿಸಿ ಕರ್ನಾಟಕದಲ್ಲಿ ಎಲ್ಲಿಯಾದರು ಮಾರಾಟ ಮಾಡೋಣ ಅಂತ ತಗೆದುಕೊಂಡು ಬಂದಿರುತ್ತೇನೆ ಎಂದು ತಿಳಿಸಿದ ನಂತರ ಪಂಚರ ಸಮಕ್ಷಮ 03 ಪ್ಲಾಸ್ಟಿಕ್ ಚೀಲದಲ್ಲಿದ್ದ ಶ್ರೀಗಂಧದ ಪೀಸ್‌ಗಳನ್ನು ತೂಕಮಾಡಿ ನೋಡಲಾಗಿ ಒಟ್ಟು 51 ಕೆ.ಜಿ ತೂಕವಿದ್ದು ಇದರ ಒಟ್ಟು ಬೆಲೆ ಸುಮಾರು ರೂ. 2 ಲಕ್ಷ 55 ಸಾವಿರ ರೂಪಾಯಿಗಳಾಗುತ್ತದೆಂದು ಅಂದಾಜಿಸಲಾಯಿತು, ಹಾಗೂ ಆಟೋವನ್ನು ಪರಿಶೀಲಿಸಲಾಗಿ ಅಕ್ರಮವಾಗಿ ಸಾಗಾಣಿಕೆ ಮಾಡಲಾಗುತ್ತಿದ್ದ ಒಟ್ಟು 51 ಕೆ.ಜಿ ತೂಕದ ಶ್ರೀಗಂಧದ ಪೀಸ್ ಗಳನ್ನು ಹಾಗೂ KA-02-D-3087 ನೋದಣಿಯ ಆಟೋವನ್ನು ಅಮಾನತ್ತುಪಡಿಸಿಕೊಂಡು, ಮೇಲ್ಕಂಡ ಶಾಂತ ಬಿನ್ ಮುನಿಯಪ್ಪ ಮತ್ತು ಅಪ್ರೋಜ್ ಬಿನ್ ಅಲ್ಲಾಬಕಾಷ್ ಇಬ್ಬರ ವಿರುದ್ದ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 86,67 ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 154 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 43/2019 ನ್ನು ದಿನಾಂಕ:03.05.2019 ರಂದು ದಾಖಲಿಸಲಾಗಿರುತ್ತದೆ" ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಸೂಲಿಬೆಲೆ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನೊಂದಣಿ ಸಂಖ್ಯೆ KA-02-D-3087 ಆಟೋ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರಿನ ಆರ್.ಟಿ.ಓ ದಾಖಲೆಗಳಲ್ಲಿ Mr. Arif S/o Nazeer Ahmed, No.23, 12. 17th Cross Padarayanapura, Bengaluru, Karnataka. ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ ಹೆಸರಿನ ವಿಳಾಸಕ್ಕೆ ದಿನಾಂಕ: 02.01.2020, 09.01.2020, 23.01.2020, 30.01.2020, 06.02.2020, ಹಾಗೂ ಅಂತಿಮ ನೋಟೀಸ್ 09.09.2025 ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯವು, ಸೂಲಿಬೆಲೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ಅಶ್ವಥ್ ನಾರಾಯಣ ಬಿನ್ ಲೇಟ್ ನಾರಾಯಣಸ್ವಾಮಿ ಮತ್ತು ಶ್ರೀ ಎನ್ ಲೋಕೇಶ್ ಬಿನ್ ನಾರಾಯಣ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ಬಿ.ಎಂ ಗೋವಿಂದ, ಆರಕ್ಷಕ ಉಪ ನಿರೀಕ್ಷಕರು, ಸೂಲಿಬೆಲೆ ಪೊಲೀಸ್ ಠಾಣೆ (ಪ್ರಸ್ತುತ ಅನುಗೊಂಡನಹಳ್ಳಿ ಪೊಲೀಸ್ ಠಾಣೆ) ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರ ಪೈಕಿ ಶ್ರೀ ಎನ್ ಲೋಕೇಶ್ ಬಿನ್ ನಾರಾಯಣ ರವರು ದಿನಾಂಕ:09.09.2025 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ಉಳಿದ ಸಾಕ್ಷಿದಾರರಿಗೆ ಹಲವಾರು ಬಾರಿ ವಿಚಾರಣೆ ಹಾಜರಾಗುವಂತೆ ನೋಟೀಸ್ ನೀಡಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರ ವಿಚಾರಣೆಯನ್ನು ಬಿಡುಗಡೆ ಮಾಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಆಟೋ ವಾಹನದ ನೊಂದಣಿ ಸಂಖ್ಯೆ KA-02-D-3087 ಒಟ್ಟು 51 ಕೆ.ಜಿ ತೂಕವುಳ್ಳ ಶ್ರೀಗಂಧ ಮರದ ಸಣ್ಣ ಸಣ್ಣ ಪೀಸ್ ಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ / ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 51 ಕೆ.ಜಿ ತೂಕವುಳ್ಳ ಶ್ರೀಗಂಧ ಮರದ ಸಣ್ಣ ಸಣ್ಣ ಪೀಸ್ ಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

<u>ಕಾರಣಗಳು</u>

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 03.05.2019 ರಂದು ಪಿರ್ಯಾದುದಾರರಿಗೆ ಸಂಜೆ 5-00 ಗಂಟೆಗೆ ಹೊಸಕೋಟೆ ಉಪ ವಿಭಾಗದ ಡಿ.ವೈ.ಎಸ್.ಪಿ ರವರು ದೂರವಾಣಿ ಕರೆಮಾಡಿ ಹೊಸಕೋಟೆ-ಜಂಗಮಕೋಟೆ ರಸ್ತೆಯಲ್ಲಿ ಒಂದು ಆಟೋದಲ್ಲಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವ ಕುರಿತು ಮಾಹಿತಿಯನ್ನು ನೀಡಿದ್ದ ಮೇರೆಗೆ ಶ್ರೀ. ಬಿ.ಎಂ ಗೋವಿಂದ, ಆರಕ್ಷಕ ಉಪ ನಿರೀಕ್ಷಕರು, ಕಾ&ಸು ರವರು ಸಿಬ್ಬಂದಿಗಳೊಂದಿಗೆ ಹೊಸಕೋಟೆ ಜಂಗಮಕೋಟೆ ರಸ್ತೆಯ ಬೆಂಡಿಗಾನಹಳ್ಳಿ ಕ್ರಾಸ್ ಬಳಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಮಯದಲ್ಲಿ ಸಂಜೆ 6-00 ಗಂಟೆಗೆ ಹೊಸಕೋಟೆ ಕಡೆಯಿಂದ ಬಂದ ಒಂದು ಆಟೋವನ್ನು ತಡೆದು ಪರಿಸೀಲಿಸಲಾಗಿ ನೊಂದಣಿ ಸಂಖ್ಯೆ KA-02-D-3087 ಆಟೋದಲ್ಲಿ 03 ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು 51 ಕೆ.ಜಿ ತೂಕದ ಶ್ರೀಗಂಧ ಮರದ ಸಣ್ಣ ಸಣ್ಣ ಪೀಸ್‌ಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡತ್ತಿರುವುದು ಕಂಡಂಬಂದಿರುತ್ತದೆ, KA-02-D-3087 ನೋಂದಣಿಯ ಆಟೋವನ್ನು ಮತ್ತು ಒಟ್ಟು 51 ಕೆ.ಜಿ ತೂಕದ ಶ್ರೀಗಂಧ ಮರದ ಸಣ್ಣ ಸಣ್ಣ ಪೀಸ್‌ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

6. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಶ್ರೀ ಎನ್ ಲೊಕೇಶ್ ಬಿನ್ ನಾರಾಯಣ, ಸೂಲಿಬೆಲೆ ರವರು ತಮ್ಮ ವಿಚಾರಣೆಯಲ್ಲಿ "ದಿನಾಂಕ 03.05.2019 ರಂದು ಸೂಲಿಬೆಲೆ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ನನ್ನ ಬರಮಾಡಿಕೊಂಡು ಹೊಸಕೋಟೆ-ಜಂಗಮಕೋಟೆ ರಸ್ತೆಯಲ್ಲಿ ಒಂದು ಆಟೋದಲ್ಲಿ ಶೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದಾಗಿ ಬಾತ್ಮಿ ಬಂದಿದ್ದು, ಈ ಬಗ್ಗೆ ತಮ್ಮೊಂದಿಗೆ ಬಂದು ಪಂಚಾಯ್ತಿದಾರರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ನಾನು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಜಂಗಮಕೋಟೆ ಮುಖ್ಯ ರಸ್ತೆಯ ಬೆಂಡಿಗಾನಹಳ್ಳಿ ಕ್ರಾಸ್ ಬಳಿ ಕಾಯುತ್ತಿದ್ದಾಗ, ಹೊಸಕೋಟೆ ಕಡೆಯಿಂದ ಒಂದು ಆಟೋ ಬರುತ್ತಿದ್ದು, ಸದರಿ ಆಟೋವನ್ನು ತಡೆಯಲು ಹೋದಾಗ ಆಟೋ ಚಾಲಕ ನಿಲ್ಲಿಸದೆ ಜೋರಾಗಿ ಆಟೋವನ್ನು ಓಡಿಸಿಕೊಂಡು ಹೋಗಿರುತ್ತಾನೆ. ಸದರಿ ಆಟೋವನ್ನು ಹಿಂಬಾಲಿಸಿಕೊಂಡು ಹೋಗಿ ಪೊಲೀಸ್ ಸಿಬ್ಬಂದಿಗಳು ಹಿಡಿದಿರುತ್ತಾರೆ. ನಂತರ ಪರಿಶೀಲಿಸಲಾಗಿ ಸದರಿ ಆಟೋದಲ್ಲಿ 03 ಪ್ಲಾಸ್ಟಿಕ್ ಚೀಲಗಳಿರುವುದು ಕಂಡುಬಂದಿರುತ್ತದೆ. ಪೊಲೀಸ್ ಸಿಬ್ಬಂದಿ ನಮ್ಮ ಸಮಕ್ಷಮ ಸದರಿ ಚೀಲಗಳಲ್ಲಿದ್ದ ಮರದ ಪೀಸ್ ಗಳನ್ನು ಸುರಿದು ನೋಡಲಾಗಿ ಅವು ಶ್ರೀಗಂಧ ಮರದ ಪೀಸ್ ಗಳಾಗಿರುತ್ತವೆ ಅವುಗಳನ್ನು ತೂಕಮಾಡಲಾಗಿ ಒಟ್ಟು 51 ಕೆ.ಜಿ ತೂಕವಿರುವುದು ಕಂಡುಬಂದಿರುತ್ತದೆ. ಸದರಿ ಆಟೋದ ಮುಂಭಾಗ ಮತ್ತು ಹಿಂಭಾಗ KA-02-D-3087 ನೊಂದಣಿ ಸಂಖ್ಯೆ ಇರುತ್ತದೆ. ಸೂಲಿಬೆಲೆ ಪೊಲೀಸರು ಸದರಿ ವಾಹನ ಮತ್ತು ಶ್ರೀಗಂಧ ಮರದ ಪೀಸ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳು ಸ್ಥಳ ಪಂಚನಾಮೆಯನ್ನು ಜರುಗಿಸಿದ್ದು ನಾನು ಸಹಿ ಮಾಡಿರುತ್ತೇನೆ, ಅಲ್ಲದೇ ಈ ದಿನ ನಾನು ಸದರಿ ಮಹಜರ್ ಪ್ರತಿಯಲ್ಲಿನ ಸಹಿಯನ್ನು ಗುರುತಿಸಿದ್ದು ಅದು ನನ್ನದೇ ಸಹಿಯಾಗಿರುತ್ತದೆಂದು ಹಾಗೂ ಸದರಿ ಪ್ರಕರಣದಲ್ಲಿ ನಾನು ಪಂಚಾಯ್ತಿ ದಾರನಾಗಿ ಸಹಿ ಮಾಡಿರುವುದು ಸತ್ಯವಾಗಿರುವುದಾಗಿ" ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಸಾಕ್ಷಿದಾರರ ಪಾಟಿ ಸವಾಲು ಮಾಡಲು ವಾಹನದ ಮಾಲೀಕರಾಗಲೀ ಅಥವಾ ಉತ್ತರಾಧಿಕಾರಿಗಳಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ

7. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

8. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಆಟೋ ವಾಹನದ ನೋಂದಣಿ ಸಂಖ್ಯೆ: KA-02-D-3087 ರಲ್ಲಿ ಒಟ್ಟು 51 ಕೆ.ಜಿ ತೂಕವುಳ್ಳ ಶ್ರೀಗಂಧ ಮರದ ಪೀಸ್ ಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

9. ಆಟೋ ವಾಹನದ ನೋಂದಣಿ ಸಂಖ್ಯೆ: KA-02-D-3087 ವಾಹನವು ನ್ಯಾಯಾಲಯದ ಮುಂದೆ ಸುಮಾರು 06 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು

ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: KA-02-D-3087 ಹಾಗೂ ಶ್ರೀಗಂಧದ ಪೀಸ್ ಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

10. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಆಟೋ ವಾಹನದ ನೋಂದಣಿ ಸಂಖ್ಯೆ: KA-02-D-3087 ರಲ್ಲಿ ಅಕ್ರಮವಾಗಿ ಒಟ್ಟು 51 ಕೆ.ಜಿ ತೂಕವುಳ್ಳ ಶ್ರೀಗಂಧ ಮರದ ಪೀಸ್ ಗಳ ಸಾಗಣೆ ಮಾಡುತ್ತಿದ್ದ ಶ್ರೀಗಂಧ ಅರಣೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ಶ್ರೀಗಂಧವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

11. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣೋತ್ಪನ್ನವಾದ ಶ್ರೀಗಂಧ ಮರದ 51 ಕೆ.ಜಿ. ತೂಕವುಳ್ಳ ಶ್ರೀಗಂಧ ಪೀಸ್ ಗಳನ್ನು ಆಟೋ ವಾಹನದ ನೋಂದಣಿ ಸಂಖ್ಯೆ: KA-02-D-3087 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 86, 87 ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 154 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ಸೂಲಿಬೆಲೆ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ಶ್ರೀಗಂಧದ ಪೀಸ್ ಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಸೂಲಿಬೆಲೆ ಪೋಲೀಸ್ ಠಾಣೆ ಕ್ರೈಂ ನಂ. 43/2019 ದಿ:03.05.2019) ರಲ್ಲಿ ಒಳಗೊಂಡಿರುವ ಆಟೋ ವಾಹನದ ನೋಂದಣಿ ಸಂಖ್ಯೆ: KA-02-D-3087 ವಾಹನ ಹಾಗೂ ಒಟ್ಟು 51 ಕೆ.ಜಿ ತೂಕವುಳ್ಳ ಶ್ರೀಗಂಧದ ಪೀಸ್ ಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:11-02-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-368

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರ್ಯಂ ನಂ.61/2019 ದಿನಾಂಕ: 22.05.2019
ಡಿ.ಎಫ್.ಓ.ಸಿ ಸಂಖ್ಯೆ:17/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು :1)ಶ್ರೀ. ಷೇಕ್ ಸಯ್ಯದ್ ಬಿನ್ ಷೇಕ್ ಅಲ್ಲಾ ಭಕ್ಷ್, 29 ವರ್ಷ, ಮುಸ್ಲಿಂ ಜನಾಂಗ, ವಿಳಾಸ: ನಂ-66/83, ನಯಾಬ್ ಸಾಬ್ ಸ್ಟ್ರೀಟ್ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ.

2)ಶ್ರೀ. ಪಠಾಣ್ ಬಾಬಾ ಪಕ್ರದ್ದಿನ್ ಬಿನ್ ಪಠಾಣ್ ಬಷೀರ್ ಖಾನ್, 22 ವರ್ಷ, ಮುಸ್ಲಿಂ ಜನಾಂಗ, ರಾಯಡುಗಲ್ಲಿ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ.

3)ಶ್ರೀ. ಪಠಾಣ್ ಉಸ್ಮಾನ್ ಅಲಿಖಾನ್ ಬಿನ್ ಪಠಾಣ್ ಮೆಹಬೂಬ್ ಖಾನ್, 27 ವರ್ಷ, ಮುಸ್ಲಿಂ ಜನಾಂಗ, ಡ್ರೈವರ್ ಕೆಲಸ, ನಂ-65/26, ನಯಾಬ್ ಸಾಬ್ ಸ್ಟ್ರೀಟ್ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ.

4) ಶ್ರೀ. ಸಲ್ಮಾನ್ ಖಾನ್ ಬಿನ್ ಸುಲ್ತಾನ್ ಖಾನ್, 21 ವರ್ಷ, ಮುಸ್ಲಿಂ ಜನಾಂಗ, ಅಂಗಡಿ ವ್ಯಾಪಾರ, ಛತ್ರಿಪಾಳ್ಯ, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು

5)ಶ್ರೀ. ತಾಜ್ ಷರೀಫ್, ಕಟ್ಟಿಗೇನಹಳ್ಳಿ ಗ್ರಾಮ

6) Mr. Shaik Shahinsha Vali S/o Shaik Darbar Vali, No.14/170-D Sahitya Theatre, Backside Kothapalli Rayachoty, Rayachoty Mandal, Kadapa Dist.

* * * * * *

<u>ಪ್ರಕರಣದ ಮುಖ್ಯಾಂಶಗಳು:-</u>

1. ದಿನಾಂಕ 22/05/2019 ರಂದು ಆರಕ್ಷಕ ಉಪ ನಿರೀಕ್ಷಕರು, ಕಾ&ಸು ರವರು ಹಾಜರುಪಡಿಸಿದ ವರದಿಯಲ್ಲಿ, "ಈ ದಿವಸ ನಾನು ಠಾಣಾ ಸಿಬ್ಬಂದಿಯವರೊಂದಿಗೆ ಕಟ್ಟಿಗೇನಹಳ್ಳಿ ಗ್ರಾಮದ ಇಂಡೋ ಸನ್ ರೈಸ್ ಶಾಲೆಯ ಹತ್ತಿರ ರಸ್ತೆಯಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಕಟ್ಟಿಗೇನಹಳ್ಳಿ ಗ್ರಾಮದ ಕಡೆಗೆ ಒಂದು ಮಿನಿ ಗೂಡ್ಸ್ ವಾಹನ ಬರುತ್ತಿದ್ದು, ವಾಹನದ ಚಾಲಕ ವಾಹನವನ್ನು ವೇಗವಾಗಿ ಓಡಿಸಿಕೊಂಡು ಹೋಗಲು ಪ್ರಯತ್ನಿಸಿದ್ದು ಕೂಡಲೇ ವಾಹನ ನಿಲ್ಲಿಸುವಂತೆ ಸೂಚಿಸಿ ನಾವು ವಾಹನದ ಹತ್ತಿರ ಹೋಗುತ್ತಿದ್ದಂತೆ ವಾಹನದಲ್ಲಿದ್ದ ಐದು ಜನರ ಪೈಕಿ ಒಬ್ಬ ಆಸಾಮಿ ಓಡಿ ಹೋಗಿದ್ದು ಕೂಡಲೇ ಟೆಂಪೋವನ್ನು

ಸುತ್ತುವರೆದುಕೊಂಡು ನಾಲ್ಕು ಜನರನ್ನು ವಶಕ್ಕೆ ಪಡೆದು ಟೆಂಪೋವನ್ನು ಪರಿಶೀಲಿಸಲಾಗಿ ಬಿಳಿ ಬಣ್ಣದ ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನವಾಗಿದ್ದು ವಾಹನದ ಮುಂಭಾಗ ಮತ್ತು ಹಿಂಭಾಗ AP-01-AX-4441 ಎಂಬ ನೊಂದಣಿ ಸಂಖ್ಯೆ ಇರುತ್ತದೆ, ವಾಹನದ ಹಿಂಭಾಗದ ಬಾಡಿಯಲ್ಲಿ ಪರಿಶೀಲಿಸಲಾಗಿ ಬಿಳಿ ಬಣ್ಣದ ಟಾರ್ಪಲ್ ನಲ್ಲಿ ಕೆಲವು ಮರದ ತುಂಡುಗಳಿದ್ದು ಅವುಗಳನ್ನು ಪಂಚಾಯ್ತಿದಾರರ ಸಮಕ್ಷಮ ಟಾರ್ಪಾಲ್ ನಿಂದ ಹೋರತೆಗೆದು ಪರಿಶೀಲಿಸಲಾಗಿ ಒಟ್ಟು 02 ರಕ್ತ ಚಂದನ ಮರದ ತುಂಡುಗಳಾಗಿದ್ದು ಸದರಿ ತುಂಡುಗಳಿಗೆ ಕ್ರ.ಸಂ. ಆರ್-01 ಮತ್ತ ಆರ್-02 ಎಂಬುದಾಗಿ ನಂಬರುಗಳನ್ನು ಕೊಟ್ಟು ಗುರುತು ಮಾಡಿದ್ದು ಅವುಗಳ ತೂಕ ಒಟ್ಟು 52 ಕೆ.ಜಿ ಇದ್ದು ಅವುಗಳ ಅಂದಾಜು ಬೆಲೆ ಸುಮಾರು ರೂ. 62,400/- ಆಗಿರುತ್ತದೆ. ಆರೋಪಿಗಳ ವಿವರಗಳನ್ನು ವಿಚಾರಿಸಲಾಗಿ, 1) ಷೇಕ್ ಸಯ್ಯದ್ ಬಿನ್ ಷೇಕ್ ಅಲ್ಲಾ ಭಕ್ಷ್, 29 ವರ್ಷ, ಮುಸ್ಲಿಂ ಜನಾಂಗ, ವಿಳಾಸ: ನಂ-66/83, ನಯಾಬ್ ಸಾಬ್ ಸ್ಟ್ರೀಟ್ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ ರಾಜ್ಯ. 2) ಪಠಾಣ್ ಬಾಬಾ ಪಕ್ರದ್ದಿನ್ ಬಿನ್ ಪಠಾಣ್ ಬಷೀರ್ ಖಾನ್, 22 ವರ್ಷ, ಮುಸ್ಲಿಂ ಜನಾಂಗ, ರಾಯಡುಗಲ್ಲಿ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ ರಾಜ್ಯ. 3) ಪಠಾಣ್ ಉಸ್ಮಾನ್ ಅಲಿಖಾನ್ ಬಿನ್ ಪಠಾಣ್ ಮೆಹಬೂಬ್ ಖಾನ್, 27 ವರ್ಷ, ಮುಸ್ಲಿಂ ಜನಾಂಗ, ಡ್ರೈವರ್ ಕೆಲಸ, ನಂ-65/26, ನಯಾಬ್ ಸಾಬ್ ಸ್ಟ್ರೀಟ್ ರಾಯಚೂಟಿ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ ರಾಜ್ಯ. 4) ಸಲ್ಮಾನ್ ಖಾನ್ ಬಿನ್ ಸುಲ್ತಾನ್ ಖಾನ್, 21 ವರ್ಷ, ಮುಸ್ಲಿಂ ಜನಾಂಗ, ಅಂಗಡಿ ವ್ಯಾಪಾರ, ಛತ್ರಿಪಾಳ್ಯ, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಎಂಬುದಾಗಿ ತಿಳಿಸಿರುತ್ತಾರೆ. ನಂತರ ಓಡಿಹೋದ ಆಸಾಮಿಯ ಬಗ್ಗೆ ವಿಚಾರಿಸಲಾಗಿ 5)ತಾಜ್ ಷರೀಫ್, ಕಟ್ಟಿಗೇನಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ಆರೋಪಿಗಳು ರಕ್ತ ಚಂದನದ ತುಂಡುಗಳನ್ನು ಎಲ್ಲಿಂದಲ್ಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಸದರಿ 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಹಾಗೂ ನೊಂದಣಿ ಸಂಖ್ಯೆ AP-01-AX-4441 ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನವನ್ನು ಅಮಾನತ್ತುಪಡಿಸಿಕೊಂಡು ಹಾಗೂ ಆರೋಪಿಗಳನ್ನು ವಶಕ್ಕೆ ಪಡೆದು ಅವರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80 ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144, 145, ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 61/2019 ನ್ನು ದಿನಾಂಕ:22.05.2019 ರಂದು ದಾಖಲಿಸಲಾಗಿರುತ್ತದೆ" ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನೊಂದಣಿ ಸಂಖ್ಯೆ AP-01-AX-4441 ಮಿನಿ ಗೂಡ್ಸ್ ವಾಹನದ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಮಿನಿ ಗೂಡ್ಸ್ ವಾಹನದ ಆರ್.ಟಿ.ಓ ದಾಖಲೆಗಳಲ್ಲಿ Mr. Shaik Shahinsha Vali S/o Shaik Darbar Vali, No.14/170-D Sahitya Theatre, Backside Kothapalli Rayachoty, Rayachoty Mandal, Kadapa Dist. ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ ಹೆಸರಿನ ವಿಳಾಸಕ್ಕೆ ದಿನಾಂಕ: 09.01.2020, 22.09.2022, 23.02.2023, ಹಾಗೂ 26.12.2024, ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯವು, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ ಮುನಿರಾಜು ಎಂ ಬಿನ್ ಮುನಿಯಪ್ಪ ಮತ್ತು ಶ್ರೀ ಅಜಯ್ ಬಿನ್ ದಸ್ತಗಿರಿ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ಪಾಲಾಕ್ಷಪ್ರಭು ಆರಕ್ಷಕ ಉಪ ನಿರೀಕ್ಷಕರು,

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ (ಪ್ರಸ್ತುತ ಕೊಡಿಗೇನಹಳ್ಳಿ ಪೊಲೀಸ್ ಠಾಣೆ) ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರ ಪೈಕಿ ಶ್ರೀ ಮುನಿರಾಜು ಎಂ ಬಿನ್ ಮುನಿಯಪ್ಪ ರವರು ದಿನಾಂಕ:22.09.2022 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ಉಳಿದ ಸಾಕ್ಷಿದಾರರಿಗೆ ಹಲವಾರು ಬಾರಿ ವಿಚಾರಣೆ ಹಾಜರಾಗುವಂತೆ ಸಮನ್ಸ್ ನೀಡಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದ ನೊಂದಣಿ ಸಂಖ್ಯೆ Ap-01-AX-4441 ಒಟ್ಟು 52 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 02 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ ಒಟ್ಟು 52 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 02 ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 22.05.2019 ರಂದು ಪಿರ್ಯಾದುದಾರರು ಠಾಣಾ ಸಿಬ್ಬಂದಿಯವರೊಂದಿಗೆ ಕಟ್ಟಿಗೇನಹಳ್ಳಿ ಗ್ರಾಮದ ಇಂಡೋ ಸನ್ ರೈಸ್ ಶಾಲೆಯ ಹತ್ತಿರ ರಸ್ತೆಯಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಕಟ್ಟಿಗೇನಹಳ್ಳಿ ಗ್ರಾಮದ ಕಡೆಗೆ ಒಂದು ಮಿನಿ ಗೂಡ್ಸ್ ವಾಹನ ಬರುತ್ತಿದ್ದು, ವಾಹನದ ಚಾಲಕ ವಾಹನವನ್ನು ವೇಗವಾಗಿ ಓಡಿಸಿಕೊಂಡು ಹೋಗಲು ಪ್ರಯತ್ನಿಸಿದ್ದು ಕೂಡಲೇ ವಾಹನ ನಿಲ್ಲಿಸಿ ಪರಿಶೀಲಿಸಲಾಗಿ ಬಿಳಿ ಬಣ್ಣದ ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನವಾಗಿದ್ದು ವಾಹನದ ಮುಂಭಾಗ ಮತ್ತು ಹಿಂಭಾಗ AP-01-AX-4441 ಎಂಬ ನೊಂದಣಿ ಸಂಖ್ಯೆ ಇರುತ್ತದೆ, ವಾಹನದ ಹಿಂಭಾಗದ ಬಾಡಿಯಲ್ಲಿ ಪರಿಶೀಲಿಸಲಾಗಿ ಒಟ್ಟು 02 ರಕ್ತ ಚಂದನ ಮರದ ತುಂಡುಗಳಾಗಿದ್ದು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದು

ಕಂಡಂಬಂದಿರುತ್ತದೆ. ಸದರಿ 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಹಾಗೂ ನೊಂದಣಿ ಸಂಖ್ಯೆ AP-01-AX-4441 ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

6. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಶ್ರೀ ಮುನಿರಾಜು ಎಂ ಬಿನ್ ಮುನಿಯಪ್ಪ, ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ರವರು ತಮ್ಮ ವಿಚಾರಣೆಯಲ್ಲಿ "ದಿನಾಂಕ 22.05.2019 ರಂದು ಸಂಜೆ 5-00 ಗಂಟೆ ಸಮಯದಲ್ಲಿ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ನೊಂದಣಿ ಸಂಖ್ಯೆ AP-01-AX-4441 ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನವನ್ನು ತಡೆದು ತಪಾಸಣೆ ನಡೆಸಿ ಅದರಲ್ಲಿ 02 ರಕ್ತ ಚಂದನದ ತುಂಡುಗಳಿದ್ದುದರಿಂದ ಪ್ರಕರಣ ದಾಖಲಿಸಿರುತ್ತಾರೆ. ನಾನು ಕೂಲಿ ಕೆಲಸ ಮುಗಿಸಿ ಮನೆಗೆ ಹೋಗುವಾಗ ಕಟ್ಟಿಗೇನಹಳ್ಳಿ ಬಳಿ ಘಟನೆ ನಡೆದಿದ್ದು ಪೊಲೀಸ್ ಸಿಬ್ಬಂದಿಗಳು ವಾಹನ ಮತ್ತು ಮಾಲನ್ನು ಅಮಾನತ್ತು ಪಡಿಸುವ ಸಮಯದಲ್ಲಿ ಹಾಜರಿದ್ದುದಾಗಿ ಹಾಗೂ ಪೊಲೀಸರು ಸಿದ್ಧಪಡಿಸಿದ ಪಂಚನಾಮೆಗೆ ಸಹಿ ಮಾಡಿರುವುದಾಗಿ, ಅಲ್ಲದೇ ಈ ದಿನ ನಾನು ಸದರಿ ಪಂಚನಾಮೆ ಪ್ರತಿಯಲ್ಲಿನ ಸಹಿಯನ್ನು ಗುರುತಿಸಿದ್ದು ಅದು ನನ್ನದೇ ಸಹಿಯಾಗಿರುತ್ತದೆಂದು ಹಾಗೂ ಸದರಿ ಪ್ರಕರಣದಲ್ಲಿ ನಾನು ಪಂಚಾಯ್ತಿ ದಾರನಾಗಿ ಸಹಿ ಮಾಡಿರುವುದು ಸತ್ಯವಾಗಿರುವುದಾಗಿ" ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಸಾಕ್ಷಿದಾರರ ಪಾಟಿ ಸವಾಲು ಮಾಡಲು ವಾಹನದ ಮಾಲೀಕರಾಗಲೀ ಅಥವಾ ಉತ್ತರಾಧಿಕಾರಿಗಳಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ

7. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

8. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ನೊಂದಣಿ ಸಂಖ್ಯೆ AP-01-AX-4441 ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದಲ್ಲಿ ಒಟ್ಟು 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

9. ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದ ನೋಂದಣಿ ಸಂಖ್ಯೆ: AP-01-AX-4441 ವಾಹನವು ನ್ಯಾಯಾಲಯದ ಮುಂದೆ ಸುಮಾರು 06 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: AP-01-AX-4441 ಹಾಗೂ ಒಟ್ಟು 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

10. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದ ನೋಂದಣಿ ಸಂಖ್ಯೆ: AP-01-AX-4441 ರಲ್ಲಿ ಅಕ್ರಮವಾಗಿ ಒಟ್ಟು 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

11. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ ಒಟ್ಟು 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದ ನೋಂದಣಿ ಸಂಖ್ಯೆ: AP-01-AX-4441 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80, ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144, 145, ಜೊತೆಗೆ ಭಾರತೀಯ ದಂಡ ಸಂಹಿತೆ 1860 ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತ ಚಂದನದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರೈಂ ನಂ. 61/2019 ದಿ:22.05.2019) ರಲ್ಲಿ ಒಳಗೊಂಡಿರುವ ಮಹೀಂದ್ರ ಪಿಕ್ ಆಪ್ ಮಿನಿ ಗೂಡ್ಸ್ ವಾಹನದ ನೋಂದಣಿ ಸಂಖ್ಯೆ: AP-01-AX-4441 ವಾಹನ ಹಾಗೂ ಒಟ್ಟು 52 ಕೆ.ಜಿ ತೂಕದ 02 ರಕ್ತ ಚಂದನದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:11-02-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-369

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.118/2019 ದಿನಾಂಕ: 07.10.2019

ಡಿ.ಎಫ್.ಓಸಿ ಸಂಖ್ಯೆ:18/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು :1)ಶ್ರೀ. ಅಮ್ಜು @ ಅಮ್ಜದ್ ಬಿನ್ ಸಯ್ಯದ್ ಸುಕುರ್ಸಾಬ್ @ ಸೈಯ್ಯದ್ ಸುಬುರ್, 54 ವರ್ಷ, ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ.

2)ಶ್ರೀ. ಅಸ್ಲಂ @ ಚುವಾ ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ.

3) Mr. Manjunath V.R S/o Ramaswamy, Varadanayakanahalli(V), Shidlaghatta(T), Chikkaballapura(D), Karnataka.

* * * * * *

<u>ಪ್ರಕರಣದ ಮುಖ್ಯಾಂಶಗಳು:-</u>

1. ದಿನಾಂಕ 07/10/2019 ರಂದು ಆರಕ್ಷಕ ಉಪ ನಿರೀಕ್ಷಕರು, ರವರು ಹಾಜರುಪಡಿಸಿದ ವರದಿಯಲ್ಲಿ, "ಈ ದಿವಸ ನಾನು ಸಂಜೆ 6:30 ಗಂಟೆಯಲ್ಲಿ ಠಾಣೆಯಲ್ಲಿದ್ದಾಗ ಬಾತ್ಮಿದಾರರು ನನಗೆ ಫೋನ್ ಮಾಡಿ ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಬಳಿ ಇರುವ ಕೆರೆ ಅಂಗಳದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಶ್ರೀ. ಅಮ್ಜು@ ಅಮ್ಜದ್, ಮತ್ತು ಶ್ರೀ. ಅಸ್ಲಂ @ ಚುವಾ ರವರು ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಬೇರೆ ಕಡೆಗೆ ಸಾಗಣೆ ಮಾಡಲು ವಾಹನಕ್ಕೆ ಜೋಡಿಸುತ್ತಿದ್ದಾರೆಂದು ಮಾಹಿತಿ ಬಂದಿದ್ದು ಅದರಂತೆ ಠಾಣಾ ಸಿಬ್ಬಂದಿಯವರ ಮುಖೇನ ಪಂಚಾಯ್ತಿದಾರರನ್ನು ಠಾಣೆಗೆ ಬರಮಾಡಿಕೊಂಡು ಬಾತ್ಮಿಯ ವಿಚಾರವನ್ನು ತಿಳಿಸಿ ಠಾಣಾ ಸಿಬ್ಬಂದಿಯವರೊಂದಿಗೆ ಪಂಚಾಯ್ತಿದಾರರನ್ನು ಕರೆದುಕೊಂಡು ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಕೆರೆಯ ಅಂಗಳದ ಬಳಿ ಹೋಗುತ್ತಿದ್ದಂತೆ ಕೆರೆಯ ಅಂಗಳದಲ್ಲಿ ಒಂದು ವಾಹನದ ಹತ್ತಿರ ದಿಂದ ಇಬ್ಬರು ಆಸಾಮಿಗಳು ನಮ್ಮನ್ನು ನೋಡಿ ಸ್ಥಳದಿಂದ ಓಡಿ ಹೋಗಿದ್ದು ಓಡಿ ಹೋದ ಆಸಾಮಿಗಳನ್ನು ವಾಹನದ ಹೆಡ್‌ಲೈಟ್ ಮತ್ತು ನಮ್ಮ ಬಳಿ ಇದ್ದ ಬ್ಯಾಟರಿ ಬೆಳಕಿನ ಸಹಾಯದಿಂದ ಶ್ರೀ. ಅಮ್ಜು @ ಅಮ್ಜದ್ ಬಿನ್ ಸಯ್ಯದ್ ಸುಕುರ್ಸಾಬ್ @ ಸೈಯ್ಯದ್ ಸುಬುರ್, 54 ವರ್ಷ, ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ, ಮತ್ತು ಶ್ರೀ. ಅಸ್ಲಂ @ ಚುವಾ ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ ಎಂದು ಠಾಣಾ ಸಿಬ್ಬಂದಿಯವರುಗಳಾದ ಪಿ.ಸಿ-1056, ಮುನಿವೀರಪ್ಪ.ಎಂ ಮತ್ತು ಪಿ.ಸಿ-1564 ಶ್ರೀನಿವಾಸ್ ರವರುಗಳು ಗುರುತಿಸಿದ್ದು ನಂತರ ಆಸಾಮಿಗಳು ಕೆರೆಯ ಅಂಗಳದಲ್ಲಿ ಬಿಟ್ಟುಹೋದ ವಾಹನದ ಹತ್ತಿರ ಹೋಗಿ ನೋಡಲಾಗಿ ವಾಹನದ ಹಿಂಭಾಗ KA-01-N-384 ನೊಂದಣಿ ಸಂಖ್ಯೆಯಿದ್ದು ಮಾರುತಿ ಸುಜುಕಿ ಓಮ್ನಿ ಕಾರಾಗಿರುತ್ತದೆ, ಸದರಿ ವಾಹನವನ್ನು ಪರಿಶೀಲಿಸಲಾಗಿ ವಾಹನದಲ್ಲಿ ಕೆಲವು ಮರದ ತುಂಡುಗಳಿದ್ದು ಅವುಗಳನ್ನು ಪಂಚಾಯ್ತಿದಾರರು ರಕ್ತ ಚಂದನ ಮರದ ತುಂಡುಗಳೆಂದು ಗುರುತಿಸಿರುತ್ತಾರೆ ಸದರಿ ವಾಹನದಲ್ಲಿ ಒಟ್ಟು 17 ರಕ್ತ ಚಂದನ ಮರದ ತುಂಡುಗಳು ಇರುತ್ತವೆ, ಸದರಿ ತುಂಡುಗಳಿಗೆ ಕ್ರ.ಸಂ ಎಕ್ಸ್ 01 ರಿಂದ ಎಕ್ಸ್ 17 ರವರೆಗೆ ಗುರುತು ಮಾಡಿ ತೂಕ ಮಾಡಲಾಗಿ ಒಟ್ಟು 17 ತುಂಡುಗಳ ತೂಕ ಒಟ್ಟು 520 ಕೆ.ಜಿ ಇರುತ್ತದೆ. ಸ್ಥಳದಿಂದ ಓಡಿ ಹೋದ ಆಸಾಮಿಗಳು ರಕ್ತ ಚಂದನದ ತುಂಡುಗಳನ್ನು ಎಲ್ಲಿಂದಲ್ಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ KA-01-N-384 ನೊಂದಣಿ ಸಂಖ್ಯೆಯ ಮಾರುತಿ ಸುಜುಕಿ ಓಮ್ನಿ ಕಾರ್ ಮತ್ತು ಒಟ್ಟು 17 ತುಂಡುಗಳ ಒಟ್ಟು 520 ಕೆ.ಜಿ ರಕ್ತ ಚಂದನದ ತುಂಡುಗಳನ್ನು ಅಮಾನತ್ತು ಪಡಿಸಿಕೊಂಡು, ಮೇಲ್ಕಂಡ

ಆರೋಪಿಗಳಾದ @ ಅಮ್ಜದ್ ಬಿನ್ ಸಯ್ಯದ್ ಸುಕುರ್ಸಾಬ್ @ ಸೈಯ್ಯದ್ ಸುಬುರ್, 54 ವರ್ಷ, ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ, ಮತ್ತು ಶ್ರೀ. ಅಸ್ಲಂ @ ಚುವಾ ಮುಸ್ಲಿಂ ಜನಾಂಗ, ಕಟ್ಟಿಗೇನಹಳ್ಳಿ ಗ್ರಾಮ ರವರುಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80 ಕರ್ನಾಟಕ ಅರಣ್ಯ ನಿಯಮ-1969 ರ ಕಲಂ 144, 145, ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 118/2019 ನ್ನು ದಿನಾಂಕ:07.10.2019 ರಂದು ದಾಖಲಿಸಲಾಗಿರುತ್ತದೆ" ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನೊಂದಣಿ ಸಂಖ್ಯೆ KA-01-N-384 ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ ಆರ್.ಟಿ.ಓ ದಾಖಲೆಗಳಲ್ಲಿ Mr. Manjunath V.R S/o Ramaswamy, Varadanayakanahalli(V), Shidlaghatta(T), Chikkaballapura(D), Karnataka ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ ಹೆಸರಿನ ವಿಳಾಸಕ್ಕೆ ದಿನಾಂಕ: 23.01.2020, 30.01.2020, 06.02.2020, 22.09.2022, ಹಾಗೂ 09.09.2025, ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯವು, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ ವೆಂಕಟೇಶ್ ಬಿನ್ ನಾರಾಯಣಪ್ಪ ಮತ್ತು ಶ್ರೀ ಮುನಿರಾಜು ಬಿನ್ ಮುನಿವೆಂಕಟಪ್ಪ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ರಾಕೇಶ್ ಆರಕ್ಷಕ ಉಪ ನಿರೀಕ್ಷಕರು, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರ ಪೈಕಿ ಶ್ರೀ ವೆಂಕಟೇಶ್ ಬಿನ್ ನಾರಾಯಣಪ್ಪ ಮತ್ತು ಶ್ರೀ ಮುನಿರಾಜು ಬಿನ್ ಮುನಿವೆಂಕಟಪ್ಪ ರವರು ದಿನಾಂಕ:09.09.2025 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ಉಳಿದ ಸಾಕ್ಷಿದಾರರಿಗೆ ಹಲವಾರು ಬಾರಿ ವಿಚಾರಣೆ ಹಾಜರಾಗುವಂತೆ ಸಮನ್ಸ್ ನೀಡಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ ನೊಂದಣಿ ಸಂಖ್ಯೆ KA-01-N-384 ಒಟ್ಟು 520 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 17 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?

3. ಪ್ರಕರಣದಲ್ಲಿ ಅಮಾನತ್ತುಪಡಿಸಿದ ಒಟ್ಟು 520 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 17 ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?

4. ಅಮಾನತ್ತುಗೊಂಡು ವಾಹನ ಮತ್ತು ಅರಣೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?

5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

<u>ಕಾರಣಗಳು</u>

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 07.10.2019 ರಂದು ಪಿರ್ಯಾದುದಾರರು ಸಂಜೆ 6:30 ಗಂಟೆಯಲ್ಲಿ ಠಾಣೆಯಲ್ಲಿದ್ದಾಗ ಬಾತ್ಮಿದಾರರು ಫೋನ್ ಮಾಡಿ ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಬಳಿ ಇರುವ ಕೆರೆ ಅಂಗಳದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಶ್ರೀ. ಅಮ್ಜು@ ಅಮ್ಜದ್, ಮತ್ತು ಶ್ರೀ. ಅಸ್ಲಂ @ ಚುವಾ ರವರು ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಬೇರೆ ಕಡೆಗೆ ಸಾಗಣೆ ಮಾಡಲು ವಾಹನಕ್ಕೆ ಜೋಡಿಸುತ್ತಿದ್ದಾರೆಂದು ಮಾಹಿತಿ ಬಂದಿದ್ದು ಅದರಂತೆ ಠಾಣಾ ಸಿಬ್ಬಂದಿಯವರೊಂದಿಗೆ ಪಂಚಾಯ್ತಿದಾರರನ್ನು ಕರೆದುಕೊಂಡು ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಕೆರೆಯ ಅಂಗಳದ ಬಳಿ ಹೋಗುತ್ತಿದ್ದಂತೆ ಕೆರೆಯ ಅಂಗಳದಲ್ಲಿ ಒಂದು ವಾಹನದ ಹತ್ತಿರ ದಿಂದ ಇಬ್ಬರು ಆಸಾಮಿಗಳು ಸ್ಥಳದಿಂದ ಓಡಿ ಹೋಗಿರುತ್ತಾರೆ, ಆಸಾಮಿಗಳು ಕೆರೆಯ ಅಂಗಳದಲ್ಲಿ ಬಿಟ್ಟುಹೋದ ವಾಹನದ ಹತ್ತಿರ ಹೋಗಿ ನೋಡಲಾಗಿ ವಾಹನದ ಹಿಂಭಾಗ KA-01-N-384 ನೊಂದಣಿ ಸಂಖ್ಯೆಯಿದ್ದು ಮಾರುತಿ ಸುಜುಕಿ ಓಮ್ನಿ ಕಾರಾಗಿರುತ್ತದೆ, ಸದರಿ ವಾಹನವನ್ನು ಪರಿಶೀಲಿಸಲಾಗಿ ವಾಹನದಲ್ಲಿ ಒಟ್ಟು 17 ರಕ್ತ ಚಂದನ ಮರದ ತುಂಡುಗಳು ಇದ್ದು, ಸದರಿ ತುಂಡುಗಳಿಗೆ ಕ್ರ.ಸಂ ಎಕ್ಸ್ 01 ರಿಂದ ಎಕ್ಸ್ 17 ರವರೆಗೆ ಗುರುತು ಮಾಡಿ ತೂಕ ಮಾಡಲಾಗಿ ಒಟ್ಟು 17 ತುಂಡುಗಳ ತೂಕ ಒಟ್ಟು 520 ಕೆ.ಜಿ ಇರುತ್ತದೆ. ಸ್ಥಳದಿಂದ ಓಡಿ ಹೋದ ಆಸಾಮಿಗಳು ರಕ್ತ ಚಂದನದ ತುಂಡುಗಳನ್ನು ಎಲ್ಲಿಂದಲ್ಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಸದರಿ KA-01-N-384 ನೊಂದಣಿ ಸಂಖ್ಯೆಯ ಮಾರುತಿ ಸುಜುಕಿ ಓಮ್ನಿ ಕಾರ್ ಮತ್ತು ಒಟ್ಟು 17 ತುಂಡುಗಳ ಒಟ್ಟು 520 ಕೆ.ಜಿ ರಕ್ತ ಚಂದನದ ತುಂಡುಗಳನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

6. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಶ್ರೀ ವೆಂಕಟೇಶ್ ಬಿನ್ ನಾರಾಯಣಪ್ಪ ಅಂಬೇಡ್ಕರ್ ಕಾಲೋನಿ, ತಿರುಮಲಶೆಟ್ಟಿಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ರವರು ತಮ್ಮ ವಿಚಾರಣೆಯಲ್ಲಿ "ದಿನಾಂಕ 07.10.2019 ರಂದು ಸಂಜೆ 6-30 ಗಂಟೆ ಸಮಯದಲ್ಲಿ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಠಾಣೆಗೆ ಬರಮಾಡಿಕೊಂಡು ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಬಳಿ ಇರುವ ಕೆರೆ ಅಂಗಳದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಶ್ರೀ. ಅಮ್ಜು@ ಅಮ್ಜದ್, ಮತ್ತು ಶ್ರೀ. ಅಸ್ಲಂ @ ಚುವಾ ರವರು ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಬೇರೆ ಕಡೆಗೆ ಸಾಗಣೆ ಮಾಡಲು

ವಾಹನಕ್ಕೆ ಜೋಡಿಸುತ್ತಿದ್ದಾರೆಂದು ಮಾಹಿತಿ ಬಂದಿದ್ದು ತಮ್ಮೊಂದಿಗೆ ಬಂದು ಪಂಚಾಯ್ತಿದಾರರಾಗಿ ಸಹಕರಿಸುವಂತೆ ಕೋರಿರುತ್ತಾರೆ, ಅದರಂತೆ ನಾನು

ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಛತ್ರಿಪಾಳ್ಯದ ಕೆರೆಯ ಅಂಗಳದ ಬಳಿ ಸಂಜೆ ಸುಮಾರು 07:15 ಗಂಟೆ ಸಮಯದಲ್ಲಿ ಹೋಗುತ್ತಿದ್ದಂತೆ ಕೆರೆಯ ಅಂಗಳದಲ್ಲಿ ಒಂದು ವಾಹನದ ಹತ್ತಿರ ಇಬ್ಬರು ಆಸಾಮಿಗಳು ಪೊಲೀಸರನ್ನು ನೋಡಿ ಓಡಿಹೋಗಿದ್ದು, ಸದರಿ ಆಸಾಮಿಗಳು ಬಿಟ್ಟುಹೋದ ವಾಹನದ ಹತ್ತಿರ ಹೋಗಿ ನೋಡಲಾಗಿ ಅದು ಹಸಿರು ಬಣ್ಣದ ಮಾರುತಿ ಸುಜುಕಿ ಓಮ್ನಿ ಕಾರಾಗಿದ್ದು ವಾಹನ ಸಂಖ್ಯೆ:KA-01-N-384 ಆಗಿರುತ್ತದೆ. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸದರಿ ವಾಹನವನ್ನು ನಮ್ಮಗಳ ಸಮಕ್ಷಮ ಪರಿಶೀಲಿಸಲಾಗಿ ವಾಹನದಲ್ಲಿ ಒಟ್ಟು 17 ರಕ್ತ ಚಂದನ ಮರದ ತುಂಡುಗಳು ಇರುವುದು ಕಂಡುಬಂದಿರುತ್ತದೆ. ಸದರಿ 17 ತುಂಡುಗಳನ್ನು ತೂಕಮಾಡಿ ನೋಡಲಾಗಿ ಒಟ್ಟು 520 ಕೆ.ಜಿ ಇರುವುದು ಕಂಡುಬಂದಿರುತ್ತದೆ. ಸ್ಥಳದಿಂದ ಓಡಿ ಹೋದ ಆರೋಪಿತರು ರಕ್ತ ಚಂದನದ ತುಂಡುಗಳನ್ನು ಎಲ್ಲಿಂದಲ್ಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿದ್ದರಿಂದ ತಿರುಮಲಶೆಟ್ಟಿಹಳ್ಳಿ ಪೊಲೀಸರು ಸದರಿ ವಾಹನವನ್ನು ಮತ್ತು ರಕ್ತ ಚಂದನದ ತುಂಡುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳು ಸ್ಥಳ ಪಂಚನಾಮೆಯನ್ನು ಜರುಗಿಸಿದ್ದು ನಾನು ಸಹಿ ಮಾಡಿರುತ್ತೇನೆ. ಅಲ್ಲದೇ ಈ ದಿನ ನಾನು ಸದರಿ ಪಂಚನಾಮೆ ಪ್ರತಿಯಲ್ಲಿನ ಸಹಿಯನ್ನು ಗುರುತಿಸಿದ್ದು ಅದು ನನ್ನದೇ ಸಹಿಯಾಗಿರುತ್ತದೆಂದು ಹಾಗೂ ಸದರಿ ಪ್ರಕರಣದಲ್ಲಿ ನಾನು ಪಂಚಾಯ್ತಿ ದಾರನಾಗಿ ಸಹಿ ಮಾಡಿರುವುದು ಸತ್ಯವಾಗಿರುವುದಾಗಿ" ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಪ್ರಕರಣದ ಎರಡನೇ ಸಾಕ್ಷಿದಾರರಾದ ಶ್ರೀ ಮುನಿರಾಜು ಬಿನ್ ಮುನಿವೆಂಕಟಪ್ಪ ಅಂಬೇಡ್ಕರ್ ಕಾಲೋನಿ, ತಿರುಮಲಶೆಟ್ಟಿಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ರವರು ತಮ್ಮ ವಿಚಾರಣೆಯಲ್ಲಿ "ದಿನಾಂಕ 07.10.2019 ರಂದು ಸಂಜೆ 6-30 ಗಂಟೆ ಸಮಯದಲ್ಲಿ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಠಾಣೆಗೆ ಬರಮಾಡಿಕೊಂಡು ಕಟ್ಟಿಗೇನಹಳ್ಳಿ ಗ್ರಾಮದ ಛತ್ರಿಪಾಳ್ಯದ ಬಳಿ ಇರುವ ಕೆರೆ ಅಂಗಳದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಶ್ರೀ. ಅಮ್ಜು@ ಅಮ್ಜದ್, ಮತ್ತು ಶ್ರೀ. ಅಸ್ಲಂ @ ಚುವಾ ರವರು ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಬೇರೆ ಕಡೆಗೆ ಸಾಗಣೆ ಮಾಡಲು ವಾಹನಕ್ಕೆ ಜೋಡಿಸುತ್ತಿದ್ದಾರೆಂದು ಮಾಹಿತಿ ಬಂದಿದ್ದು ತಮ್ಮೊಂದಿಗೆ ಬಂದು ಪಂಚಾಯ್ತಿದಾರರಾಗಿ ಸಹಕರಿಸುವಂತೆ ಕೋರಿರುತ್ತಾರೆ, ಅದರಂತೆ ನಾನು ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಛತ್ರಿಪಾಳ್ಯದ ಕೆರೆಯ ಅಂಗಳದ ಬಳಿ ಸಂಜೆ ಸುಮಾರು 07:15 ಗಂಟೆ ಸಮಯದಲ್ಲಿ ಹೋಗುತ್ತಿದ್ದಂತೆ ಕೆರೆಯ ಅಂಗಳದಲ್ಲಿ ಒಂದು ವಾಹನದ ಹತ್ತಿರ ಇಬ್ಬರು ಆಸಾಮಿಗಳು ಪೊಲೀಸರನ್ನು ನೋಡಿ ಓಡಿಹೋಗಿದ್ದು, ಸದರಿ ಆಸಾಮಿಗಳು ಬಿಟ್ಟುಹೋದ ವಾಹನದ ಹತ್ತಿರ ಹೋಗಿ ನೋಡಲಾಗಿ ಅದು ಹಸಿರು ಬಣ್ಣದ ಮಾರುತಿ ಸುಜುಕಿ ಓಮ್ನಿ ಕಾರಾಗಿದ್ದು ವಾಹನ ಸಂಖ್ಯೆ:KA-01-N-384 ಆಗಿರುತ್ತದೆ. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸದರಿ ವಾಹನವನ್ನು ನಮ್ಮಗಳ ಸಮಕ್ಷಮ ಪರಿಶೀಲಿಸಲಾಗಿ ವಾಹನದಲ್ಲಿ ಒಟ್ಟು 17 ರಕ್ತ ಚಂದನ ಮರದ ತುಂಡುಗಳು ಇರುವುದು ಕಂಡುಬಂದಿರುತ್ತದೆ. ಸದರಿ 17 ತುಂಡುಗಳನ್ನು ತೂಕಮಾಡಿ ನೋಡಲಾಗಿ ಒಟ್ಟು 520 ಕೆ.ಜಿ ಇರುವುದು ಕಂಡುಬಂದಿರುತ್ತದೆ. ಸ್ಥಳದಿಂದ ಓಡಿ ಹೋದ ಆರೋಪಿತರು ರಕ್ತ ಚಂದನದ ತುಂಡುಗಳನ್ನು ಎಲ್ಲಿಂದಲ್ಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿದ್ದರಿಂದ ತಿರುಮಲಶೆಟ್ಟಿಹಳ್ಳಿ ಪೊಲೀಸರು ಸದರಿ ವಾಹನವನ್ನು ಮತ್ತು ರಕ್ತ ಚಂದನದ ತುಂಡುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳು ಸ್ಥಳ ಪಂಚನಾಮೆಯನ್ನು ಜರುಗಿಸಿದ್ದು ನಾನು ಸಹಿ ಮಾಡಿರುತ್ತೇನೆ. ಅಲ್ಲದೇ ಈ ದಿನ ನಾನು ಸದರಿ ಪಂಚನಾಮೆ ಪ್ರತಿಯಲ್ಲಿನ ಸಹಿಯನ್ನು ಗುರುತಿಸಿದ್ದು ಅದು ನನ್ನದೇ ಸಹಿಯಾಗಿರುತ್ತದೆಂದು ಹಾಗೂ ಸದರಿ ಪ್ರಕರಣದಲ್ಲಿ ನಾನು ಪಂಚಾಯ್ತಿ ದಾರನಾಗಿ ಸಹಿ ಮಾಡಿರುವುದು ಸತ್ಯವಾಗಿರುವುದಾಗಿ" ಹೇಳಿಕೆಯನ್ನು ನೀಡಿರುತ್ತಾರೆ ಸದರಿ ಸಾಕ್ಷಿದಾರರ ಪಾಟಿ ಸವಾಲು ಮಾಡಲು ವಾಹನದ ಮಾಲೀಕರಾಗಲೀ ಅಥವಾ ಉತ್ತರಾಧಿಕಾರಿಗಳಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ

7. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

8. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ನೊಂದಣಿ ಸಂಖ್ಯೆ KA-01-N-384 ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದಲ್ಲಿ ಒಟ್ಟು 520 ಕೆ.ಜಿ ತೂಕದ 17 ರಕ್ತ ಚಂದನದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

9. ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ ನೋಂದಣಿ ಸಂಖ್ಯೆ: KA-01-N-384 ವಾಹನವು ನ್ಯಾಯಾಲಯದ ಮುಂದೆ ಸುಮಾರು 06 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಭಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: KA-01-N-384 ಹಾಗೂ ಒಟ್ಟು 520 ಕೆ.ಜಿ ತೂಕದ 17 ರಕ್ತ ಚಂದನದ ತುಂಡುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

10. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ ನೋಂದಣಿ ಸಂಖ್ಯೆ: KA-01-N-384 ರಲ್ಲಿ ಅಕ್ರಮವಾಗಿ ಒಟ್ಟು 520 ಕೆ.ಜಿ ತೂಕದ 17 ರಕ್ತ ಚಂದನದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

11. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ ಒಟ್ಟು 520 ಕೆ.ಜಿ ತೂಕದ 17 ರಕ್ತ ಚಂದನದ ತುಂಡುಗಳನ್ನು ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ

ನೋಂದಣಿ ಸಂಖ್ಯೆ: KA-01-N-384 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80, ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144, 145, ಜೊತೆಗೆ ಭಾರತೀಯ ದಂಡ ಸಂಹಿತೆ 1860 ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ

ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತ ಚಂದನದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ,

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರೈಂ ನಂ. 118/2019 ದಿ:07.10.2019) ರಲ್ಲಿ ಒಳಗೊಂಡಿರುವ ಮಾರುತಿ ಸುಜುಕಿ ಓಮ್ನಿ ಕಾರ್ ವಾಹನದ ನೋಂದಣಿ ಸಂಖ್ಯೆ: KA-01-N-384 ವಾಹನ ಹಾಗೂ ಒಟ್ಟು 520 ಕೆ.ಜಿ ತೂಕದ 17 ರಕ್ತ ಚಂದನದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:18-02-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-370

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಹೊಸಕೋಟೆ ಪೊಲೀಸ್ ಠಾಣೆಯ ಕ್ರೈಂ ನಂ.217/2019 ದಿನಾಂಕ: 17.06.2019
ಡಿ.ಎಫ್.ಓ.ಸಿ ಸಂಖ್ಯೆ:15/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ. , ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1)ಶ್ರೀ ರಮೇಶ್ ಬಿನ್ ಲೇಟ್ ಮುನಿಸ್ವಾಮಿ, 41 ವರ್ಷ, ಆಗಾಮುಡಿಯರ್ ಜನಾಂಗ, ಕೂಲಿಕೆಲಸ, ಉಣಚ್ಚಿ ಗ್ರಾಮ, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು.

2) ಶ್ರೀ ಶಿವಕುಮಾರ್ ಬಿನ್ ಲೇಟ್ ಕಾಶಿ 42ವರ್ಷ, ಪ.ಜಾತಿ, ಕೂಲಿಕೆಲಸ, ವಾಸ; ಪುದುಪೊಂಗಲಂ ಗ್ರಾಮ, ಜಮ್ಮನ ಪುದುರು ಪೋಸ್ಟ್, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು.

3) ಶ್ರೀ ರಘು ಕುಡುಮಂಪಲಿ, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು.

4) ಶ್ರೀ ಟೈಲರ್ ಸಮಿಉಲಾ, ಕಟ್ಟಿಗೆನಹಳ್ಳಿ ಗ್ರಾಮ, ಹೊಸಕೋಟೆ.

5) ಶ್ರೀ ಅನ್ಸರ್ ಕಟ್ಟಿಗೆನಹಳ್ಳಿ ಗ್ರಾಮ, ಹೊಸಕೋಟೆ.

6) ಶ್ರೀ ಅಸ್ಸರ್ ಕಟ್ಟಿಗೆನಹಳ್ಳಿ ಗ್ರಾಮ, ಹೊಸಕೋಟೆ.

* * * * * *

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ17/06/2019 ರಂದು ಸಂಜೆ 6-00 ಗಂಟೆ ಆರಕ್ಷಕ ಉಪ ನಿರೀಕ್ಷಕರು, ಕಾ&ಸು ಶ್ರೀ ರಾಜು ಸಿಎಂ ರವರು ಹಾಜರುಪಡಿಸಿದ ವರದಿಯಲ್ಲಿ ಸದರಿ ದಿನದಂದು ಸಂಜೆ 03:00 ಗಂಟೆ ಸಮಯದಲ್ಲಿ ಹೊಸಕೋಟೆ ಕಡೆಯಿಂದ ಮಾಲೂರು ಕಡೆಗೆ ವಾಹನ ನೊಂದಣಿ ಸಂಖ್ಯೆ:DL-4C-AE-1757 ಇನೋವ ಕಾರಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದಾಗಿ ಬಂದ ಖಚಿತ ಮಾಹಿತಿಯನ್ನು ಇಲಾಖಾ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನ ಪಡೆದು ಪಂಚಾಯ್ತಿದಾರರು ಹಾಗೂ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಹೊಸಕೋಟೆ-ಮಾಲೂ ರಸ್ತೆ, ಹರಳೂರು ಕ್ರಾಸ್ ಬಳಿ ಕಾಯುತ್ತಿದ್ದಾಗ, ಮಧ್ಯಾಹ್ನ 3-45 ಗಂಟೆಗೆ ಹೊಸಕೋಟೆ ಕಡೆಯಿಂದ ಬರುತ್ತಿದ್ದ DL-4C-AE-1757 ರ ಇನೋವ ಕಾರನ್ನು ನೋಡಿ ನಿಲ್ಲಿಸುವಂತೆ ಸೂಚಿಸಿದಾಗ, ಚಾಲಕ ಕಾರನ್ನು ರಸ್ತೆ ಬದಿ ನಿಲ್ಲಿಸಿ ಓಡಿ ಹೋದ, ಸಿಬ್ಬಂದಿ ಕಾರನ್ನು ಸುತ್ತುವರೆದು ನೋಡಲಾಗಿ ಸದರಿ ಕಾರಿನಲ್ಲಿ ಇಬ್ಬರು ಆಸಾಮಿಗಳಿದ್ದು ಅವರನ್ನು ವಶಕ್ಕೆ ಪಡೆದು ಕಾರಿನ ಹಿಂಬದಿಯ ಸೀಟಿನ ಕೆಳಭಾಗದಲ್ಲಿ ರಕ್ತ ಚಂದನ ಮರದ ತುಂಡುಗಳನ್ನು ಲೋಡ್ ಮಾಡಿರುವುದು ಕಂಡು ಬಂದಿರುತ್ತದೆ, ಆಸಾಮಿಗಳ ಹೆಸರು ಮತ್ತು ವಿಳಾಸವನ್ನು ಪಂಚರ ಸಮಕ್ಷಮ ವಿಚಾರಿಸಲಾಗಿ 1) ರಮೇಶ್ ಬಿನ್ ಲೇಟ್ ಮುನಿಸ್ವಾಮಿ, 41 ವರ್ಷ, ಆಗಾಮುಡಿಯರ್ ಜನಾಂಗ, ಕೂಲಿಕೆಲಸ, ಉಣಚ್ಚಿ ಗ್ರಾಮ, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು, 2)ಶಿವಕುಮಾರ್ ಬಿನ್ ಲೇಟ್ ಕಾಶಿ 42ವರ್ಷ, ಪ.ಜಾತಿ, ಕೂಲಿಕೆಲಸ, ವಾಸ; ಪುದುಪೊಂಗಲಂ ಗ್ರಾಮ, ಜಮ್ಮನ ಪುದುರು ಪೋಸ್ಟ್, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು, ಹಾಗೂ ಓಡಿ ಹೋದ ಕಾರು ಚಾಲಕನ ವಿವರ ಕೆಳಲಾಗಿ ರಘು ಕುಡುಮಂಪಲಿ, ತಿರುಪತ್ತೂರು ತಾಲ್ಲೂಕ್ ವೇಲೂರು ಜಿಲ್ಲೆ, ತಮಿಳುನಾಡು, ಎಂದು ತಿಳಿಸಿರುತ್ತಾರೆ. ಸದರಿ ಮಾಲನ್ನು ಕಡಪ ಜಿಲ್ಲೆಯ ರಾಯಚೂಟಿಯಿಂದ ಅಕ್ರಮವಾಗಿ ಸಾಗಾಣಿಕೆ ಮಾಡಿಕೊಂಡು ಕಟ್ಟಿಗೆನಹಳ್ಳಿ ವಾಸಿಗಳಾದ ಟೈಲರ್ ಸಮಿಉಲಾ, ಅನ್ಸರ್ ಮತ್ತು ಅಸ್ಸರ್ ರವರಿಗೆ ನೀಡಲು ಬರುತ್ತಿರುವುದಾಗಿ ತಿಳಿಸಿರುತ್ತಾರೆ. ಕಾರಿನಲ್ಲಿ ಒಟ್ಟು 10 ರಕ್ತ ಚಂದನ ಮರದ ತುಂಡುಗಳಿದ್ದು ಅವುಗಳಿಗೆ ಕ್ರ.ಸಂ. 01 ರಿಂದ 10 ರವರೆಗೆ ನಂಬರುಗಳನ್ನು ನೀಡಿ ತೂಕ ಮಾಡಲಾಗಿ ಸದರಿ 10 ತುಂಡಗಳು ಒಟ್ಟು 296.5 ಕೆ.ಜಿ ಇದ್ದು ಅವುಗಳ ಮಾರುಕಟ್ಟೆಯ ಬೆಲೆ ಅಂದಾಜು ರೂ. 15,00,000/- ಗಳಾಗುತ್ತೆಂದು ಪಂಚಾಯ್ತಿದಾರರು ಅಭಿಪ್ರಾಯ ಪಟ್ಟಿರುತ್ತಾರೆ. ನಂತರ ಸದರಿ ತುಂಡುಗಳನ್ನು ಮತ್ತು ಇನೋವ ಕಾರುನ್ನು ಅಮಾನತ್ತು ಪಡಿಸಿಕೊಂಡು, ಮೇಲ್ಕಂಡ ಆಸಾಮಿಗಳ ವಿರುದ್ದ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 24, ಹಾಗೂ 62, ಕರ್ನಾಟಕ ಅರಣ್ಯ ನಿಯಮ-1969ರ ಕಲಂ144, 145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 217/2019 ನ್ನು ದಿನಾಂಕ 17.06.2019 ರಂದು ದಾಖಲಿಸಿ, ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಹಸ್ತಾಂತರಿಸಿದ್ದು, ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ DL-4C-AE-1757 ಕಾರಿನ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, 'B' Extract ದಾಖಲೆಗಳನುಸಾರ ಶ್ರೀ. ವಿಕಾಸ್ ಮಲ್ಹೋತ್ರಾ ಬಿನ್ ಎಸ್ಎಚ್ ಪಿಸಿ ಮಲ್ಹೋತ್ರಾ, ನಂ. ಎ 189, ಗುಜರನವಾಲ ಟೌನ್-1 ದೆಹಲಿ-0 ರವರ ಹೆಸರಿನಲ್ಲಿ ನೋಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ

ಹೆಸರಿನ ವಿಳಾಸಕ್ಕೆ ದಿನಾಂಕ:02.01.2020, 09.01.2020, 23.01.2020, 30.01.2020, 06.02.2020, 13.02.2020, 05.03.2020, 01.09.2020, 15.09.2022, 10.11.2022, 23.02.2023 ಹಾಗೂ ಅಂತಿಮ ನೋಟೀಸ್ 03.09.2025 ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಸದರಿಯವರಿಗೆ ನೀಡಿದ ನೋಟೀಸ್‌ಗಳು ಸದರಿ ವಿಳಾಸದಲ್ಲಿ ಸ್ವೀಕೃತವಾಗದೇ ವಾಪಸ್ಸು ಈ ಕಛೇರಿಗೆ ಬಂದಿರುತ್ತವೆ.

3. ನ್ಯಾಯಾಲಯವು, ಹೊಸಕೋಟೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ನಾಗರಾಜ್ ಬಿನ್ ಗೋವಿಂದರಾಜು ಮತ್ತು ಶ್ರೀ ವಿ. ಸುಬ್ರಮಣಿ ಬಿನ್ ವೆಂಕಟರಮಣಪ್ಪ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ರಾಜು ಸಿ.ಎಂ ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರು ಗೈರುಹಾಜರಾಗಿರುತ್ತಾರೆ. ಪ್ರಕರಣವು ಹಳೆಯದಾದ ಕಾರಣ ಸದರಿಯವರ ವಿಚಾರಣೆಯನ್ನು ಬಿಡುಗಡೆ ಮಾಡಲಾಗಿರುತ್ತದೆ. ವಾಹನದ ಮಾಲೀಕರು ಇದುವರೆವಿಗೂ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿಯವರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಇನೋವ ಕಾರ್ ವಾಹನದ ನೊಂದಣಿ ಸಂಖ್ಯೆ:DL-4C-AE-1757 ರಲ್ಲಿ ಒಟ್ಟು 296.5 ಕೆ.ಜಿ. ತೂಕದ 10 ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 296.5 ಕೆ.ಜಿ. ತೂಕದ 10 ರಕ್ತ ಚಂದನ ಮರದ ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 17.06.2019 ರಂದು ಹೊಸಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹೊಸಕೋಟೆ ಕಡೆಯಿಂದ ಮಾಲೂರು ಕಡೆಗೆ ವಾಹನ ನೊಂದಣಿ ಸಂಖ್ಯೆ:DL-4C-AE-1757 ಇನೋವ ಕಾರಿನಲ್ಲಿ ಅಕ್ರಮವಾಗಿ ಯಾವು ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದಾಗಿ ಆರಕ್ಷಕ ಉಪ ನಿರೀಕ್ಷಕರು, ಕಾ&ಸು ಶ್ರೀ ರಾಜು ಸಿಎಂ ರವರಿಗೆ ಬಂದ ಖಚಿತ ಮಾಹಿತಿಯಂತೆ ಸಿಬ್ಬಂದಿಗಳೊಂದಿಗೆ ಹೊಸಕೋಟೆ-ಮಾಲೂರು ರಸ್ತೆ, ಹರಳೂರು ಕ್ರಾಸ್ ಬಳಿ ಕಾಯುತ್ತಿದ್ದಾಗ, ಹೊಸಕೋಟೆ ಕಡೆಯಿಂದ ಬರುತ್ತಿದ್ದ DL-4C-AE-1757 ರ ಇನೋವ ಕಾರನ್ನು ತಡೆದು ಪರಿಶೀಲಿಸಲಾಗಿ ಕಾರಿನಲ್ಲಿ ರಕ್ತ ಚಂದನ ಮರದ ತುಂಡುಗಳು ಇರುವುದು ಕಂಡುಬಂದಿರುತ್ತದೆ. ರಕ್ತ ಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕ ಮಾಡುತ್ತಿದ್ದ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತುಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ, ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ

7. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಇನೋವ ಕಾರ್ ವಾಹನದ ನೋಂದಣಿ ಸಂಖ್ಯೆ:DL-4C-AE-1757 ರಲ್ಲಿ ಒಟ್ಟು 296.5 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 10 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡು ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

8. ಇನೋವ ಕಾರ್ ನೊಂದಣಿ ಸಂಖ್ಯೆ:DL-4C-AE-1757 ವಾಹನವು ನ್ಯಾಯಾಲಯದ ಮುಂದೆ ಸುಮಾರು 06 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ:DL-4C-AE-1757 ಹಾಗೂ ರಕ್ತ ಚಂದನವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

9. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಇನೋವ ಕಾರ್ ನೊಂದಣಿ ಸಂಖ್ಯೆ:DL-4C-AE-1757 ರಲ್ಲಿ ಅಕ್ರಮವಾಗಿ ಒಟ್ಟು 296.5 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 10 ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲವೆಂದು

ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ 296.5 ಕೆ.ಜಿ. ತೂಕವುಳ್ಳ 10 ತುಂಡುಗಳನ್ನು ಇನೋವ ಕಾರ್ ವಾಹನ ನೊಂದಣಿ ಸಂಖ್ಯೆ:DL-4C-AE-1757 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80 ಕರ್ನಾಟಕ ಅರಣ್ಯ ನಿಯಮ- 1963 ರ ಕಲಂ 144, 145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ಹೊಸಕೋಟೆ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು. ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಹೊಸಕೋಟೆ ಪೊಲೀಸ್ ಠಾಣೆ ಕ್ರೈಂ ನಂ. 217/2019 ದಿ 17.06.2019) ರಲ್ಲಿ ಒಳಗೊಂಡಿರುವ ಇನೋವ ಕಾರ್ ವಾಹನ ನೊಂದಣಿ ಸಂಖ್ಯೆ: DL-4C-AE-1757 ವಾಹನ ಹಾಗೂ ಒಟ್ಟು 296.5 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 10 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:02-02-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.
`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-371

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 21 ಕವಿಇ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:11.02.2026.

ಅಧಿಸೂಚನೆ

ವಿಷಯ: ದಿನಾಂಕ:01.01.2026 ರಲ್ಲಿದ್ದಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018 ದಿನಾಂಕ:15.05.2019.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 14 ಕವಿಇ 2025, ದಿನಾಂಕ: 17/03/2025.
3. ವಿಮಾ ನಿರ್ದೇಶಕರ ಪತ್ರ ಸಂಖ್ಯೆ: ವಿನಿ/ಸಿಶಾ/1520/2025-26, ದಿನಾಂಕ:20/01/2025.

*****

ಉಲ್ಲೇಖ(2) ರ ಅಧಿಸೂಚನೆಯಲ್ಲಿ ದಿನಾಂಕ:01.01.2025 ರಲ್ಲಿದ್ದಂತೆ ವಿಮಾ ಇಲಾಖೆಯ ಉಪನಿರ್ದೇಶಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಉಲ್ಲೇಖ(3) ರ ದಿನಾಂಕ:20.01.2026 ರ ನಿರ್ದೇಶಕರ ಪತ್ರದಲ್ಲಿ ದಿನಾಂಕ:01.01.2026 ರಿಂದ 31.12.2026 ರವರೆಗಿನ ಬ್ಲಾಕ್ ಅವಧಿಯಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ದಿನಾಂಕ:01.01.2026 ರಲ್ಲಿದ್ದಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಅನುಬಂಧದಲ್ಲಿ ಲಗತ್ತಿಸಿ ಪ್ರಕಟಿಸಿರುವ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಬಾಧಿತರಾದ ಅಧಿಕಾರಿಗಳು ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಲಾದ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರವಿಪ್ರಕಾಶ್. ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ದಿನಾಂಕ:01-01-2026 ರಲ್ಲಿದ್ದಂತೆ ಉಪ ನಿರ್ದೇಶಕರ ಹುದ್ದೆಯ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ.ಸಂ	ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
	ಎಸ್.ಆರ್.ಟಿ.ಆರಾಧ್ಯ	15-04-1945	03-10-1968	12-12-1980	12-12-1980	ನಿವೃತ್ತಿ
	ಡಿ.ನಾರಾಯಣ ಸ್ವಾಮಿ	03-02-1936	06-11-1956	12-12-1980	12-12-1980	ನಿವೃತ್ತಿ
	ಎನ್.ಚಂದ್ರಮೌಳಿ	10-04-1932	01-10-1956	12-12-1980	12-12-1980	ನಿವೃತ್ತಿ
	ಕೆ.ಮುತ್ತು ಕುಮಾರ್	15-05-1933	01-10-1956	12-12-1980	12-12-1980	ನಿವೃತ್ತಿ
	ಬಿ.ಆರ್. ರಾಮಲಿಂಗಪ್ಪ	04-12-1931	28-04-1959	06-01-1981	06-01-1981	ನಿವೃತ್ತಿ
	ಎ.ಸಿ.ಫ್ರಾನ್ಸಿಸ್	06-01-1931	08-05-1958	18-02-1981	18-02-1981	ನಿವೃತ್ತಿ
	ಕೆ.ಬೊಮ್ಮಯ್ಯ (ಪ.ಜಾ)	26-08-1935	09-11-1959	24-06-1985	24-06-1985	ನಿವೃತ್ತಿ
	ಬಿ.ಸೌಭಾಗ್ಯ	21-10-1933	20-10-1958	19-01-1990	19-01-1990	ನಿವೃತ್ತಿ
	ಪಿ.ಎಸ್.ಶ್ರೀಪತಿ	09-01-1933	17-09-1959	22-01-1991	22-01-1991	ನಿವೃತ್ತಿ
	ಎಂ.ನರಸಿಂಹಶಾಸ್ತ್ರಿ	21-01-1936	01-10-1960	10-02-1992	10-02-1992	ನಿವೃತ್ತಿ
	ಎಂ.ಪಂಕಜಮ್ಮ	06-12-1934	07-12-1953	10-02-1992	10-02-1992	ನಿವೃತ್ತಿ
	ಆರ್.ಎಂ.ದೊಡ್ಡಮನಿ (ಪ.ಪಂ)	11-08-1953	23-01-1984	26-05-1992	26-05-1992	ಮುಂಬಡ್ತಿ
	ಡಿ.ಬಸವರಾಜು (ಪ.ಜಾ)	01-06-1955	14-06-1984	27-05-1992	27-05-1992	ನಿವೃತ್ತಿ
	ಹೆಚ್.ಎ.ಲಕ್ಷ್ಮೀ ನಾರಾಯಣ	26-04-1937	18-04-1966	13-10-1993	13-10-1993	ನಿವೃತ್ತಿ
	ಜಿ.ಜಿ.ನಾಯಕ್	27-09-1936	18-04-1966	14-02-1994	14-02-1994	ನಿವೃತ್ತಿ
	ಕೆ.ಸಾವಿತ್ರಿ (ಪ.ಜಾ)	22-06-1962	14-07-1988	14-02-1994	14-02-1994	ಮುಂಬಡ್ತಿ
	ಎ.ದ್ವಾರಕಾನಾಥ್	27-09-1937	18-04-1966	03-03-1994	03-03-1994	ನಿವೃತ್ತಿ
	ಬಿ.ರಾಮೇಗೌಡ	15-05-1937	18-04-1966	01-01-1995	01-01-1995	ನಿವೃತ್ತಿ
	ಕೆ.ಎಸ್.ಶೇಷಾದ್ರಿ	10-05-1937	21-04-1966	05-05-1995	05-05-1995	ನಿವೃತ್ತಿ
	ಎಂ. ನರಸಿಂಹಯ್ಯ	04-10-1940	20-04-1966	01-06-1995	01-06-1995	ನಿವೃತ್ತಿ
	ಆರ್. ರಾಜಶೇಖರಯ್ಯ	03-06-1938	01-06-1966	01-06-1995	01-06-1995	ನಿವೃತ್ತಿ
	ಎಸ್.ಕೆ.ಕುಲಕರ್ಣಿ	20-07-1961	19-01-1984	02-11-1995	02-11-1995	ಸ್ವ.ಇ.ನಿ.
	ಎಂ.ಕೆ.ಕೃಷ್ಣೇಗೌಡ	06-06-1939	16-05-1966	26-06-1997	26-06-1997	ನಿವೃತ್ತಿ
	ಬಿ.ಎಂ.ವೇಣುಗೋಪಾಲ್	15-08-1953	19-05-1973	21-10-2011	21-10-2011	ನಿವೃತ್ತಿ
	ಹೆಚ್.ಟಿ.ಶಂಕರೇಗೌಡ	18-08-1954	04-10-1976	27-12-2013	27-12-2013	ನಿವೃತ್ತಿ
1	ವಿಜಯ್ ಕುಮಾರ್ ಎಸ್. ಕಳ್ಳೀಮನಿ (ಪ್ರ.ಜಾ)	20-07-1974	05-03-1999	11-09-2014	11-09-2014	-
	ಕೆ.ಜ್ಯೋತಿಬಾಯಿ	25-08-1955	19-10-1973	27-06-2015	27-06-2015	ನಿವೃತ್ತಿ
	ಹೆಚ್.ಸಿ.ಲಕ್ಷ್ಮೀಕಾಂತನ್ (ಪ.ಜಾ)	08-05-1957	26-11-1983	07-09-2015	07-09-2015	ನಿವೃತ್ತಿ
	ಎಂ.ಕುಮಾರ್	27-05-1959	19-10-1981	06-09-2017	06-09-2017	ನಿವೃತ್ತಿ
	ಹೆಚ್.ವಿ.ಶ್ರೀಧರ್ (ಪ.ಜಾ)	01-06-1958	01-02-1988	06-09-2017	06-09-2017	ನಿವೃತ್ತಿ
	ಕೆ.ಹೆಚ್.ನರಸೇಗೌಡ	06-09-1961	11-04-1985	27-12-2019	27-12-2019	ನಿವೃತ್ತಿ
	ಕೆ.ಎ.ಶ್ರೀನಿವಾಸ್	01-01-1960	15-04-1985	27-12-2019	27-12-2019	ನಿವೃತ್ತಿ
	ಸತೀಶ್ ಪಿ.	22-12-1960	22-04-1985	22-07-2020	22-07-2020	ನಿವೃತ್ತಿ

	ಸೋಮಶೇಖರಯ್ಯ ವಿ. (ಪ.ಪಂ)	01-02-1964	30-11-1991	22-07-2020	22-07-2020	ಮರಣ
	ಶಂಕರೇಗೌಡ	27-04-1961	07-08-1985	19-01-2021	19-01-2021	ನಿವೃತ್ತಿ
	ಮಾರಪ್ಪ	20-10-1963	02-12-1991	27-07-2021	27-07-2021	ನಿವೃತ್ತಿ
2	ಮರಿಯತೇಜಸ್ವಿನಿ ಎಸ್.	14-07-1970	28-07-1994	18-04-2022	18-04-2022	-
3	ಗೌರಿ ರಾಜಶೇಖರ	23-09-1968	07-06-1994	18-02-2025	18-02-2025	-
4	ಸುರೇಶ್ ಐ. ತಾರೀಹಾಳ್	30-11-1971	09-08-1994	18-02-2025	18-02-2025	-
5	ಮಾಲಾ ಬಿ.	24-03-1972	20-06-2000	18-02-2025	18-02-2025	-
6	ಸುಬ್ರಹ್ಮಣ್ಯ ಕೃಷ್ಣ ಅವಧಾನಿ	30-08-1971	08-06-2000	18-02-2025	18-02-2025	-
7	ಮೋಹನ್ ಜಿ.	24-09-1984	08-06-2017	18-02-2025	18-02-2025	-
8	ಪ್ರಶಾಂತ್ ಕುಮಾರ್	01-06-1985	08-06-2017	18-02-2025	18-02-2025	-
9	ದೀಪಿಕಾ ಡಿ.	23-11-1986	21-06-2017	18-02-2025	18-02-2025	-
10	ಜ್ಞಾನ ಗಂಗ್ಯೋತ್ರಿ ವೈ.ಜಿ. ಪಾಟೀಲ್	12-04-1974	08-06-2000	18-02-2025	18-02-2025	-

PR-372

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 5 ಸಉಲಾ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:26.02.2026.

ಅಧಿಸೂಚನೆ

ವಿಷಯ: ದಿನಾಂಕ: 01.01.2026 ರಲ್ಲಿದ್ದಂತೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ:15.05.2019.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 3 ಸಉಲಾ 2025, ದಿನಾಂಕ: 17.03.2025.
3. ಇವರ ಪತ್ರ ಸಂಖ್ಯೆ: DPSALM/ADMN/E2/1/2026-ADMN ದಿನಾಂಕ: 07.01.2026.

*****

ಉಲ್ಲೇಖ (2)ರ ಅಧಿಸೂಚನೆಯಲ್ಲಿ ದಿನಾಂಕ: 01.01.2025ರಲ್ಲಿದ್ದಂತೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಉಪ ನಿರ್ದೇಶಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಉಲ್ಲೇಖಿತ(3)ರ ದಿನಾಂಕ:07.01.2026ರ ನಿರ್ದೇಶಕರ ಪತ್ರದಲ್ಲಿ ದಿನಾಂಕ:01.01.2025 ರಿಂದ 31.12.2025ರವರೆಗಿನ ಬ್ಲಾಕ್ ಅವಧಿಯಲ್ಲಿ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಉಪ ನಿರ್ದೇಶಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ದಿನಾಂಕ:01.01.2026 ರಲ್ಲಿದ್ದಂತೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಅನುಬಂಧದಲ್ಲಿ ಲಗತ್ತಿಸಿ ಪ್ರಕಟಿಸಿರುವ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಬಾಧಿತರಾದ ಅಧಿಕಾರಿಗಳು ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಲಾದ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರವಿಪ್ರಕಾಶ್ .ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು).

ಅನುಬಂಧ
ದಿನಾಂಕ:01.01.2026 ರಲ್ಲಿದ್ದಂತೆ ಉಪನಿರ್ದೇಶಕರ ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು ಶ್ರೀ/ಶ್ರೀಮತಿ	ಮೀಸಲಾತಿ ಪ್ರವರ್ಗ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿ ಜ್ಯೇಷ್ಠತೆಗೆ ನೈಜವಾಗಿ ಅರ್ಹತಾ ದಿನಾಂಕ	ನಿವೃತ್ತಿ / ಮರಣ ಹೊಂದಿದ ದಿನಾಂಕ	ಷರಾ
-	ಸಿ. ಮೋಹನ್ ಕಾಮತ್	-	16-03-1936	01-04-1958	29-01-1983	29-01-1983	31-03-1994	ದಿನಾಂಕ:12.07.1993ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಕೆ. ಎನ್. ಕಿಣಿ	-	18-11-1936	07-05-1956	06-04-1984	06-04-1984	30-11-1994	ದಿನಾಂಕ:31.03.1994ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಎಸ್. ಬಿ. ಪಾಟೀಲ್	-	29-06-1937	23-03-1959	06-04-1984	06-04-1984	30-06-1995	ದಿನಾಂಕ:30.11.1994 ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಎಸ್. ಎ. ಭಟ್	-	25-06-1940	26-04-1959	09-04-1984	09-04-1984	30-06-1998	ವಯೋ ನಿವೃತ್ತಿ
-	ಕೆ. ಜಿ. ಶಶಿಕುಮಾರ	-	14-02-1934	07-06-1954	13-04-1984	13-04-1984	29-02-1992	ವಯೋ ನಿವೃತ್ತಿ
-	ಎನ್. ಎಸ್. ಷಣ್ಮುಖಪ್ಪ	-	11-07-1942	19-12-1959	23-06-1984	23-06-1984	31-07-2000	ದಿನಾಂಕ:21.06.1999ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಪಿ. ಬಿ. ಕಣಜಿಕರ್	-	13-12-1940	03-07-1964	08-04-1985	08-04-1985	31-12-1998	ವಯೋ ನಿವೃತ್ತಿ
-	ಪಿ. ಎನ್. ಹೆಗಡೆ	-	28-04-1940	08-06-1960	16-06-1988	16-06-1988	30-04-1998	ವಯೋ ನಿವೃತ್ತಿ
-	ಎಸ್. ಕೆ. ಜೈನ್	-	03-04-1950	13-06-1973	05-05-1989	05-05-1989		ಸೇವೆಯಿಂದ ವಜಾಗೊಂಡಿರುತ್ತಾರೆ.
-	ಕೆ. ಎನ್. ರಾಮಸ್ವಾಮಿ	-	24-07-1947	08-09-1975	20-11-1989	20-11-1989	31-07-2005	ವಯೋ ನಿವೃತ್ತಿ
-	ಕೆ. ಸುಂದರರಾಜ್	-	21-11-1945	06-06-1975	23-11-1992	23-11-1992	30-11-2003	ವಯೋ ನಿವೃತ್ತಿ
-	ಆರ್. ಬಸವಣ್ಣ	-	10-12-1949	01-06-1977	06-07-1995	06-07-1995	31-12-2007	ವಯೋ ನಿವೃತ್ತಿ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

-	ಓ. ಬೊಮ್ಮಣ್ಣ	-	08-11-1953	01-10-1981	11-08-1995	11-08-1955	30-11-2013	ದಿನಾಂಕ:31.08.2010 ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಎಸ್. ಎನ್. ಪಟವಾರಿ	-	16-02-1947	19-11-1975	02-08-2001	02-08-2001	28-02-2005	ವಯೋ ನಿವೃತ್ತಿ
-	ಹೆಚ್. ಎಸ್. ಕೋಟ್ಟೂರಕರ	-	01-01-1947	29-12-1969	02-08-2001	02-08-2001	31-12-2004	ವಯೋ ನಿವೃತ್ತಿ
-	ಕೆ. ಎಂ. ಶಾರದ	-	06-03-1945	09-02-1968	02-08-2001	02-08-2001	31-03-2003	ವಯೋ ನಿವೃತ್ತಿ
-	ದಿನಕರರಾವ್ ಅತ್ನರಕರ್	-	25-10-1947	26-04-1966	02-08-2001	02-08-2001	22-07-2004	ಮರಣ
-	ಬಿ. ದೊಡ್ಡನರಸಯ್ಯ	-	02-03-1948	21-07-1976	02-08-2001	02-08-2001	31-03-2006	ವಯೋ ನಿವೃತ್ತಿ
-	ಎ. ಆರ್. ಸತ್ಯನಾರಾಯಣ	-	04-09-1952	01-10-1981	14-06-2006	01-06-2006	30-09-2012	ವಯೋ ನಿವೃತ್ತಿ
-	ಸಿ. ಕೃಷ್ಣಪ್ಪ	-	09-06-1955	01-10-1981	12-09-2013	11-09-2013	30-06-2015	ವಯೋ ನಿವೃತ್ತಿ
-	ಹೆಚ್. ರುದ್ರಪ್ಪ	-	01-06-1954	27-03-1984	13-09-2013	11-09-2013	31-05-2014	ವಯೋ ನಿವೃತ್ತಿ
-	ಟಿ. ಪುಟ್ಟಸ್ವಾಮಿ	-	01-05-1954	01-12-1983	19-09-2013	11-09-2013	30-04-2014	ವಯೋ ನಿವೃತ್ತಿ
-	ಎನ್. ರಂಗಯ್ಯ	-	29-09-1962	02-09-1985	20-08-2015	13-08-2015	30-09-2022	ದಿನಾಂಕ:17.01.2020 ರಂದು ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ.
-	ಶಂಕರ ಭೀ. ನಾಯಕವಾಡಿ	-	20-05-1958	30-03-1984	24-08-2015	13-08-2015	31-05-2018	ವಯೋ ನಿವೃತ್ತಿ
-	ಎಸ್. ಆರ್. ದುಂಡಗಿ	-	20-07-1961	30-03-1984	01-07-2020	02-06-2020	31-07-2021	ವಯೋ ನಿವೃತ್ತಿ
-	ವಿ. ಕಲಾವತಿ	-	22-10-1964	02-09-1985	09-06-2020	02-06-2020	31.10.2024	ವಯೋ ನಿವೃತ್ತಿ
-	ನಾಡಗಿರಿ ಆರ್. ಶಂಕರ್	-	19-07-1961	02-09-1985	09-06-2020	02-06-2020	31-07-2021	ವಯೋ ನಿವೃತ್ತಿ
-	ಡಿ. ನಾರಾಯಣಸ್ವಾಮಿ	-	25-07-1962	26-11-1988	30-07-2022	30-07-2022	31-07-2022	ವಯೋ ನಿವೃತ್ತಿ
1	ಸಾವಿತ್ರಿ	ಪ.ಜಾತಿ	08-12-1972	24-06-2003	02-08-2022	30-07-2022	-	ಉಪನಿರ್ದೇಶಕರು (ಆಡಳಿತ)
2	ಲತಾ ಐ. ಕೆ.	-	26-03-1966	26-11-1988	05-09-2022	3-09-2022	-	ಉಪನಿರ್ದೇಶಕರು (ಪಿಂಚಣಿ ಕುಂದುಕೊರತೆ ನಿವಾರಣೆ)

(ರವಿಪ್ರಕಾಶ್ .ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು).

PR-373

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH